ಅಚಲ

ಫೆಬ್ರವರಿ 2001

ತಿಂಗಳ ಪತ್ರಿಕೆ

ಒಳಗೇನಿದೆ ?

- ಹೆಣ್ಣು ಮಗುವನ್ನು ಕಾಡುವ ಬಾಲ್ಯದ ಕರಿ ನೆರಳುಗಳು
  - ನೇಮಿಚಂದ್ರ
- ಕಥೆಯಾದಳು ಸಾವಿತ್ರಿ
  - ದೇವಿ
- ಈಶಾನ್ಯ ಮೂಲೆಯಲ್ಲಿ
  - ಹೆಚ್. ಎನ್. ಗೀತಾ
- ಪಾಕಿಸ್ಥಾನದಲ್ಲಿ ಮಹಿಳಾ ಚಳುವಳಿ
  - ಸಿ. ವಿ. ಆನಂದ್
- ನಿರ್ದೇಶಕಿಯ ದ್ವಂದ್ವಗಳು
  - ಶಾಂತಾನಾಗರಾಜ್

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 16 ಸಂಚಿಕೆ - 2

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಬಿ. ಎನ್. ಸುಮಿತ್ರಾಬಾಯಿ

ಶಾಂತಾನಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 15 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಆಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಪಿ,.ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ, ಬೆಂಗಳೂರು - 560 085

''ಮಹಿಳಾ ಸಶಕ್ತೀಕರಣ''ಕ್ಕೆ ಒಂದು ವರ್ಷ ಸಾಕೆ?

ಮಹಿಳಾ ಮೀಸಲಾತಿ ಬಿಲ್ಲು ನೆನೆಗುದಿಗೆ ಬಿತ್ತು. ಆದರೆ ಚೋದ್ಯ ಎಂದರೆ, ಯಾವೆಲ್ಲ ವಿಕೃತ ರಾಜಕೀಯ ಶಕ್ತಿಗಳು ಪ್ರಜಾಪ್ರಭುತ್ವದ ಹೆಸರಿನಲ್ಲಿ ಪಿತೃಪ್ರಾಧಾನ್ಯವನ್ನು ಕಾಯ್ದು ಕೊಂಡಿವೆಯೋ ಅದೇ ಶಕ್ತಿಗಳ ನಡುವಿನಿಂದ ಇನ್ನೊಂದು ''ಕಾಮನಬಿಲ್ಲು'' ಮಹಿಳೆಯರೆದುರು ಮೂಡಿಬಂದಿದೆ! ಆಳುವ ಸರ್ಕಾರ 2001ನೆಯ ಇಸವಿಯನ್ನು ''ಮಹಿಳಾ ಸಶಕ್ತೀಕರಣ ವರ್ಷ'' ಎಂದು ಘೋಷಿಸಿದೆ. ಕಳೆದ ಜನವರಿ 4ನೇ ತಾರೀಖು ಈ ಸಶಕ್ತೀಕರಣ ವರ್ಷದ ಔಪಚಾರಿಕ ಉದ್ಘಾಟನೆ ಪ್ರಧಾನಿಯವರಿಂದ ನೆರವೇರಿತು. ಇಡೀ ವರ್ಷದಲ್ಲಿ ಮಹಿಳಾ ಸಶಕ್ತೀಕರಣಕ್ಕಾಗಿ ತನ್ನ ಕಾರ್ಯಕ್ರಮದ ಯೋಜನೆಯನ್ನು ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಈಗಾಗಲೇ ಸಿದ್ಧಪಡಿಸಿದ್ದೂ ಆಗಿದೆ.

ಮೊದಲ ಹೆಜ್ಜೆಯೆಂದು 5 ಮಹಿಳೆಯರ ವಿಶೇಷ ಸಾಮರ್ಥ್ಯವನ್ನು, ಅವರ ಧೈರ್ಯ, ಕಾರ್ಯಕ್ಷಮತೆ, ತ್ಯಾಗ, ಸಮಾಜಸೇವೆಗಳನ್ನು ಗುರುತಿಸಿ, ಹೊಸರೂಪದ ''ಸ್ತ್ರೀಶಕ್ತಿ ಪುರಸ್ಕಾರ''ಗಳನ್ನು ಸರ್ಕಾರ ನೀಡಿ ಗೌರವಿಸಿದೆ. ಬರುವ ದಿನಗಳಲ್ಲಿ ದೇಶಾದ್ಯಂತ ಮಹಿಳಾ ಮಂಡಲಗಳ ಬ್ಲಾಕ್ ಮಟ್ಟದ ಸಮಾವೇಶ ನಡೆಸಿ, ಮಹಿಳಾ ಸಶಕ್ತೀಕರಣ ತತ್ವ ಮತ್ತು ಈ ಘೋಷಿತ ವರ್ಷದ ಮಹತ್ವವನ್ನು ಮಂಡಲ ಕಾರ್ಯಕರ್ತೆಯರಿಗೆ ಮನವರಿಕೆ ಮಾಡಿಕೊಡುವ ಯೋಜನೆ ಇದೆ. ಹಾಗೆಯೇ ರಾಷ್ಟ್ರಮಟ್ಟದ ವಿಚಾರಸಂಕಿರಣ, ಸಭೆ, ಸಮಾರಂಭಗಳ ಮೂಲಕ ಮಹಿಳೆಯರ 'ಆರ್ಥಿಕ ಸಶಕ್ತೀಕರಣ', 'ಸಾಮಾಜಿಕ ಸಶಕ್ತೀಕರಣ'ಗಳ ಅಗತ್ಯದ ಬಗ್ಗೆ ಸಾರ್ವಜನಿಕ ಅಭಿಪ್ರಾಯ ರೂಪಿಸುವ ಕಾರ್ಯಕ್ರಮಗಳೂ ನಡೆಯಲಿವೆ. ಈ ವಾರ್ಷಿಕ ಕಾರ್ಯಕ್ರಮದ ಅಂಗವಾಗಿಯೇ ಸರ್ಕಾರ ಕೌಟುಂಬಿಕ ಹಿಂಸಾಚಾರಗಳಿಗೆ ದಿಗ್ಬಂಧನ ಹಾಕಲು ಹೊಸ ಕಾನೂನೊಂದನ್ನು ಜಾರಿಗೆ ತರುವ ಯತ್ನ ನಡೆಸಿದೆ.

ಆದರೆ ಎಂಬತ್ತರ ದಶಕದಿಂದಲೂ ಮಹಿಳಾ ವಿಮೋಚನೆಗಾಗಿಯೇ ಸಂಘಟಿತ ಹೋರಾಟ ನಡೆಸುತ್ತಾ ಬಂದಿರುವ ಮಹಿಳಾ ಸಂಘಟನೆಗಳು ಈ ಸರ್ಕಾರಿ ಘೋಷಣೆಯನ್ನು ಗುಮಾನಿ, ಅವಿಶ್ವಾಸಗಳಿಂದ ನೋಡುತ್ತಿವೆ. ಚುನಾವಣಾ ವರ್ಷ ಎದುರಿಗಿರುವುದನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ನಡೆಸಿರುವ ಇನ್ನೊಂದು ರಾಜಕೀಯ ಗಿಮಿಕ್ ಇದು ಎಂದು ಅವು ಭಾವಿಸುತ್ತವೆ. ಅಖಿಲಭಾರತ ಜನವಾದಿ ಮಹಿಳಾ ಸಂಘಟನೆಯ (DWF) ಕಾರ್ಯದರ್ಶಿ ಬೃಂದಾ ಕಾರತ್ ಹೇಳುವಂತೆ ಶಕ್ತಿಗಳಿಕೆಗೆ ಆರ್ಥಿಕವಾಗಿ ಮಹಿಳೆಯರನ್ನು ಬಲಗೊಳಿಸುವುದೇ ಮೊದಲ ಹೆಜ್ಜೆ. ಆದರೆ ಈಗ ಸರ್ಕಾರ ದಿನದಿನವೂ ಕಾರ್ಖಾನೆಗಳನ್ನು ಮುಚ್ಚಿಸಿ ಲಕ್ಷಾಂತರ ಮಹಿಳೆಯರನ್ನು ಬೀದಿಪಾಲು ಮಾಡುತ್ತಿದೆ. ರಸ್ತೆ ಬದಿಯ ವ್ಯಾಪಾರ ವ್ಯವಸ್ಥೆಯನ್ನು ನಿರ್ನಾಮ ಮಾಡುವ ಮೂಲಕ ಅಸಂಖ್ಯಾತ ಮಹಿಳೆಯರ ಜೀವನಾಧಾರವನ್ನೇ ಕಸಿಯಲಾಗುತ್ತಿದೆ. ಈಗ ನಡೆದಿರುವುದು ಮಹಿಳೆಯರ 'ನಿರ್ಬಲೀಕರಣ'ವೇ ಹೊರತು ಸಶಕ್ತೀಕರಣವಲ್ಲ. ಪ್ರಶಸ್ತಿ, ಸನ್ಮಾನಾದಿಗಳಿಂದ ಮಹಿಳೆಯರ ಸಾಮರ್ಥ್ಯದ ಸಾಂಕೇತಿಕ ಆರಾಧನೆಗಿಂತ ಹೆಚ್ಚಿನದೇನೂ ಸಾಧನೆಯಾಗಲಾರದು. ಸಾರ್ವಜನಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಇನ್ನೂ ಹೆಚ್ಚು ಪ್ರಯೋಜನಕಾರಿ ಎಂದು ಬೃಂದಾ ಅಭಿಪ್ರಾಯ ಪಡುತ್ತಾರೆ.

'ಮಾನುಷಿ' ಮಹಿಳಾ ಪತ್ರಿಕೆಯ ಪ್ರಸಿದ್ಧ ಸಂಪಾದಕಿ, ಚಿಂತಕಿ ಮಧು ಕಿಶ್ವರ್ ಅವರು ಸರ್ಕಾರ ತರಲು ಬಯಸಿರುವ ಹೊಸ ಕಾನೂನಿನ ಅಗತ್ಯದ ಬಗ್ಗೆಯೇ ಅನುಮಾನ ತೋರುತ್ತಾರೆ. ಕೌಟುಂಬಿಕ ಹಿಂಸಾಚಾರ ವಿರೋಧಿ ಹೊಸಕಾನೂನು ಜಾರಿಗೊಳಿಸುವುದು ಇಲ್ಲವೆ ಹಳೆಯದಕ್ಕೆ ತಿದ್ದುಪಡಿ ತರುವುದು ಇವೆಲ್ಲ ಆಡಳಿತ ವ್ಯವಸ್ಥೆಯಲ್ಲಿ ಈಗಾಗಲೇ ಮೈಗೂಡಿರುವ ನಿಷ್ಕ್ರಿಯವಾದ ಗೊಂದಲ, ಗೋಜಲುಗಳನ್ನು ಇನ್ನಷ್ಟು ಹೆಚ್ಚಿಸಬಲ್ಲವು ಅಷ್ಟೆ. ನಮಗೆ ಬೇಕಿರುವದು ನಿರರ್ಥಕ ಕಾನೂನು ಕೋಟಲೆಗಳ ರಾಶಿಯಲ್ಲ; ಮಹಿಳೆಯರಿಗೆ ನಿಜವಾಗಿ ಈ ಕಾನೂನುಗಳು ಹೇಳುವ ನ್ಯಾಯ ಕಾರ್ಯರೂಪದಲ್ಲಿ ಜಾರಿಗೆ ತರಬಲ್ಲ, ಭ್ರಷ್ಟರಲ್ಲದ, ಪ್ರಾಮಾಣಿಕ ಅಧಿಕಾರಿ ವರ್ಗ ಮತ್ತು ಆಡಳಿತ ವ್ಯವಸ್ಥೆ. ಈ ಎರಡೂ ಈಗ ಕೊಳೆತು ನಾರುತ್ತಿವೆ. ಸರ್ಕಾರ ಮೊದಲು ತನ್ನ ಈ ಆಡಳಿತ ಶಾಹಿಯನ್ನು ತೊಳೆದು ಶುಚಿ ಮಾಡಲಿ ಎಂದು ಮಧು ಕಿಶ್ವರ್ ಕಟುವಾಗಿ ವಿಮರ್ಶಿಸುತ್ತಾರೆ.

ಹಿಂದೆ ಅಂತಾರಾಷ್ಟ್ರೀಯ ಮಹಿಳಾವರ್ಷವೊಂದು ಘೋಷಿತವಾಗಿದ್ದಾಗ, ಇಂದಿರಾಗಾಂಧಿ ನೇತೃತ್ವದ ಸರ್ಕಾರ ಆ ಬಗ್ಗೆ ಪ್ರಚಾರ, ಭಾಷಣ, ವಿಚಾರ ಸಂಕಿರಣ, ಸನ್ಮಾನ, ಚರ್ಚೆಗಳಂಥ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ನಡೆಸಿತ್ತು. ಆ ಕಾರ್ಯ ಕ್ರಮಗಳ ಘೋಷಿತ ಆಶಯಕ್ಕೂ ಗ್ರಾಮೀಣ ಭಾರತದ ನಿರಕ್ಷರಿ ಕೆಳಸ್ತರದ ಮಹಿಳೆಯರ ನಿಜಸ್ಥಿತಿಗಳಿಗೂ ಅಗಾಧವಾದ ಕಂದರವಿತ್ತು.

ಈ ವಾಸ್ತವವನ್ನು ಎತ್ತಿ ತೋರಿಸಿ ಅಂದಿನ ವಿಚಾರವಂತ, ಬುದ್ಧಿ ಜೀವಿವರ್ಗ ಸರ್ಕಾರಿ ಘೋಷಣೆಯನ್ನು ಗೇಲಿ, ವಿಡಂಬನೆ, ಟೀಕೆಗಳಿಗೆ ಒಳಗು ಮಾಡಿದ್ದುಂಟು. ಆದರೆ ಮಹಿಳಾ ವರ್ಷ ಕಳೆದು, ಮಹಿಳಾ ದಶಕವಾಗಿ ಬೆಳೆದಾಗ ದೇಶದ ಅಂದಿನ ಸಂಕೀರ್ಣ ರಾಜಕೀಯ ಎಚ್ಚರದ ಹೊಸ ಅಲೆಯಲ್ಲಿ ಮಹಿಳಾಜಾಗೃತಿಯ ಗಾಳಿ ಬೀಸತೊಡಗಿತು. ಸ್ವತಂತ್ರ ಭಾರತದಲ್ಲೇ ಮಹಿಳೆಯರು ಎಷ್ಟು ಅಸ್ವತಂತ್ರರಾಗಿ ಉಳಿದಿದ್ದಾರೆಂಬ ಅರಿವು ಹೆಚ್ಚಿದಂತೆ ಮಹಿಳೆಯರು ಸಂಘಟಿತರಾಗಿ ತಮ್ಮ ರಾಜಕೀಯಾರ್ಥಿಕ ಸಾಮಾಜಿಕ ವಿಮೋಚನೆಗಾಗಿ ಹೋರಾಡಲು ತೊಡಗಿದ್ದು ಈಗ ಚರಿತ್ರೆಯಾಗಿದೆ. ಇತಿಹಾಸದ ಚಕ್ರ ತಿರುಗಿದೆ. ಅಂದು ಅಸ್ತಿತ್ವಕ್ಕೆ ಬಂದ ಮಹಿಳಾ ಹೋರಾಟಗಾರರ ತಂಡಗಳ ಪ್ರತಿನಿಧಿಗಳೇ ಈಗ ಇಂದಿನ ಸರ್ಕಾರದ ಘೋಷಣೆಯನ್ನು ಸಿನಿಕತನದಿಂದ ಟೀಕಿಸುತ್ತಿರುವುದು ಕೆಲವರಿಗೆ ವಿಚಿತ್ರವೆಂದು ತೋರಬಹುದು.

ಆದರೆ ಈಗಿನ ಮಹಿಳಾ ಸಂಘಟನಾಕಾರರ ಪ್ರತಿಕ್ರಿಯೆಗಳು ಟೀಕಿಸಲೆಂದೇ ಮಾಡಿದ ಕುಯುಕ್ತಿಯ ಟೀಕೆಗಳಲ್ಲ, ಬದಲಾಗಿ ಈ ಮಹಿಳಾ ಸಂಘಟನೆಗಳು ಬೇರಿನ ನೆಲೆಯಲ್ಲಿನ ಸಾಮಾನ್ಯ ಮಹಿಳೆಯರ ನಡುವೆ ಕೆಲಸ ಮಾಡುತ್ತ, ಅವರ ದೈನಂದಿನ ನೈಜ ಸಮಸ್ಯೆಗಳ ಅರಿವಿನಿಂದಲೇ ಈ ರೀತಿ ಪ್ರತಿಕ್ರಿಯಿಸಿವೆ ಎನ್ನುವುದನ್ನು ನೋಡಬೇಕು. ಯಾವುದೇ ಮೇಲ್ಪದರದ ಕೆಲಸಗಳು ಅಥವಾ ಕಣ್ಣೊರೆಸುವ ರಾಜಕೀಯ ಹೂಟಗಳು ಇಂಥ ಕೆಳಸ್ತರದ ಮಹಿಳೆಯರಿಗೆ ಎಷ್ಟು ನಿಜವಾಗಿ ಉಪಯುಕ್ತ ಆಗಬಲ್ಲವು ಎಂಬಂಥ ಅರ್ಥಪೂರ್ಣ ಎಚ್ಚರದ ನುಡಿಗಳೆಂದು ಈ ಪ್ರತಿಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳಬೇಕು.

ಇದುವರೆಗಿನ ಹೋರಾಟ ಮಹಿಳೆಯರಿಗೆ ಕಲಿಸಿರುವ ಒಂದು ಪಾಠ ಎಂದರೆ ಮಹಿಳೆಯರ ಶಕ್ತಿ, ಸಾಮರ್ಥ್ಯಗಳನ್ನು ಬಲಪಡಿಸುವ ಯಾವ ಯತ್ನವೇ ಇರಲಿ ಅದು ಶುರುವಾಗಬೇಕಾದ್ದು ಹಳ್ಳಿಯ ನಿರಕ್ಷರಸ್ಥ ಹಾಗೂ ಕೆಳಸ್ತರದ ಬಡವರ್ಗದ ದುಡಿಮೆಗಾರ ಮಹಿಳೆಯರ ಹಂತದಿಂದಲೇ ಎಂಬುದಾಗಿದೆ. ಈಗಿನ ವ್ಯವಸ್ಥೆಯಲ್ಲಿ ಶಿಕ್ಷಣ, ಉದ್ಯೋಗಾದಿಗಳಿಂದ ಸವಲತ್ತಿನ ನೆಲೆಯಲ್ಲಿರುವ ನಗರ ಕೇಂದ್ರಿತ ಮಧ್ಯಮವರ್ಗದ ಮಹಿಳೆಯರು 'ಸಶಕ್ತೀಕರಣ'ಕ್ಕೆ ಕೊಟ್ಟುಕೊಳ್ಳಬಹುದಾದ ವ್ಯಾಖ್ಯಾನವೇ ಬೇರೆ. ಬಡತನದ ರೇಖೆಯನ್ನೂ ತಲುಪದಷ್ಟು ದುರ್ಭರ ಆರ್ಥಿಕ ನೆಲೆಗಳಲ್ಲಿರುವ ಮಹಿಳೆಯರಲ್ಲಿ 'ಸಶಕ್ತೀಕರಣ' ಎಂಬುದಕ್ಕೆ ನೀಡಬೇಕಾಗಿರುವ ಅರ್ಥವೇ ಬೇರೆ. ಆದ್ದರಿಂದ ''ಸಶಕ್ತೀಕರಣ'' ದ ಹೋರಾಟದ ತಾತ್ವಿಕತೆಯು ಸವಲತ್ತುಳ್ಳವರಿಗೆ ಮತ್ತು ಸವಲತ್ತು ವಂಚಿತರಾಗಿರುವವರಿಗೆ ಬೇರೆ ಬೇರೆಯಾಗಿಯೇ ಅನ್ವಯವಾಗಬೇಕಿದೆ. ಉದಾಹರಣೆಗೆ:- ಮನೆಗಳ ನಾಲ್ಕು ಗೋಡೆಗಳೊಳಗೇ ಬಂದಿಗಳಾಗಿ ಕುಡಿದು ಬಂದು ಹಿಂಸಿಸುವ ತಂದೆಯರು, ಗಂಡಂದಿರೊಂದಿಗೆ ಏಗಬೇಕಾದ ಗ್ರಾಮೀಣ ನಿರಕ್ಷರಿ ಹೆಣ್ಣು ಮಕ್ಕಳೆದುರಲ್ಲಿ ''ಸಶಕ್ತೀಕರಣ'' ಎಂಬ ಘೋಷಣೆಯೇ ಆಡಂಬರದ ದುಬಾರಿ ಪದಪುಂಜ ಮಾತ್ರ. ಬೇಡವಾದಾಗ ಹೇಳದೆ ಕೇಳದೆ ತನ್ನನ್ನು ಬಿಟ್ಟು ಬೇರೊಬ್ಬಳನ್ನು ಮದುವೆಯಾಗಬಲ್ಲ ಗಂಡಂದಿರೊಂದಿಗೆ ಏಗುತ್ತಾ ಜೀವವುಳಿಸಿಕೊಳ್ಳಲೇ ಹೋರಾಡುತ್ತಿರುವ ಕೆಳಸ್ತರದ ಮಹಿಳೆ ಎದುರಿಸುತ್ತಿರುವ ಕೌಟುಂಬಿಕ ಹಿಂಸಾಚಾರಗಳ ಪಟ್ಟಿ ಮಾಡುವುದೂ ಅಸಾಧ್ಯ. ಬಡತನ, ನಿರಕ್ಷರತೆಗಳು ಇಂದಿಗೂ ಈ ಮಹಿಳೆಯರನ್ನು ಮುಂದುವರೆಯಲು ಬಿಡದಂಥ ಅಡ್ಡಿಗಳಾಗಿವೆ. ಸಂಪ್ರದಾಯಗಳ ರೀತಿ ರಿವಾಜುಗಳು ಗಂಡಿಗಿಂತ ಹೆಣ್ಣು ಕಡಿಮೆಯೆಂದೇ ನೋಡಲು ಕಲಿಸಿರುತ್ತವೆ. ಎರಡು ಹೊತ್ತಿನ ಊಟವನ್ನು ಕುಟುಂಬಕ್ಕೆ ಒದಗಿಸಲಿಕ್ಕಾಗಿ ಒಳಗೂ ಹೊರಗೂ ದುಡಿಯಲೇ ಬೇಕಾದ ಸ್ತ್ರೀಯರು ಬೀಡಿಕಟ್ಟುವುದು, ಊದುಬತ್ತಿ ತಯಾರಿಕೆ, ಸಿದ್ಧ ಉಡುಪುಗಳ ಕಾರ್ಖಾನೆ, ಕಟ್ಟಡಗಳ ಕೂಲಿ ಕೆಲಸ ಇಲ್ಲವೆ ಮನೆಗೆಲಸಗಳಲ್ಲಿ ಅತಿ ಕಠಿಣ ದೇಹ ಶ್ರಮದಿಂದ ಬದುಕುವುದು ಪಟ್ಟಣಗಳಲ್ಲೂ ನಿತ್ಯನೋಟ. ಅಷ್ಟಿಷ್ಟು ಓದಿದ್ದವರಾದರೆ ತಮ್ಮ ಹಕ್ಕುಗಳ ಬಗ್ಗೆ ಕಿಂಚಿತ್ತಾದರೂ ಅರಿವು ಪಡೆದವರನ್ನು ಇವರಲ್ಲಿ ಕಾಣಬಹುದು. ತೀರಾ ನಿರಕ್ಷರಿಗಳಾದವರು ಗಂಡಂದಿರು ತಮ್ಮ ಕೈಬಿಟ್ಟಾಗ ನಿಲ್ಲಲೂ ನೆಲೆಯಿರದೆ, ಮಕ್ಕಳನ್ನು ಸಾಕುವ ಹೊಣೆ ಬೆನ್ನಿಗೇರಿಸಿಕೊಂಡು ನುಚ್ಚಾಗುತ್ತಿದ್ದಾರೆ.

ಬಡಮಹಿಳೆಯರ ಸ್ಥಿತಿ ಇದಾದರೆ ನಗರಗಳ ಮಧ್ಯಮ ವರ್ಗಗಳ ಸುಶಿಕ್ಷಿತ ಸ್ತ್ರೀಯರದು ಬೇರೆಯದೇ ಜೀವನಸ್ತರ. ಮಹಿಳೆಯರ ದೀರ್ಘ ಚರಿತ್ರೆಯಲ್ಲಿ ಇವರಿಗೆ ಶಿಕ್ಷಣ. ಉದ್ಯೋಗಗಳ ಸವಲತ್ತುಗಳು ಕೈಗೆ ಎಟುಕುವಂತಾಗಿದೆ. ಬಸ್ ಕಂಡಕ್ಟರ್‌ಗಳಿಂದ, ಟ್ಯಾಕ್ಸಿ ಡ್ರೈವರ್‌ಗಳಿಂದ ವೈಮಾನಿಕ ಅಧಿಕಾರಿಗಳವರೆಗೆ, ಟೈಪಿಸ್ಟ್,ಕ್ಲಾರ್ಕ್‌ಗಳಿಂದ ಸಾಫ್ಟ್‌ವೇರ್ ತಜ್ಞೆಯರವರೆಗೆ, ದಾದಿಯರಿಂದ ಹಿಡಿದು ಅತ್ಯುನ್ನತ ವೈದ್ಯಕೀಯ ವಿಜ್ಞಾನಿಗಳವರೆಗೆ ಹೀಗೆ ಎಲ್ಲಾ ಉದ್ಯೋಗ ಕ್ಷೇತ್ರಗಳಿಗೂ ಈ ವರ್ಗದ ಮಹಿಳೆಯರು ಇಂದು ಪ್ರವೇಶಿಸಿದ್ದಾಗಿದೆ. ಇಂಥವರ ದೃಷ್ಟಿಯಲ್ಲಿ ''ಸಶಕ್ತೀಕರಣ'' ಎನ್ನುವುದು ತಕ್ಕ ಮಟ್ಟಿಗೆ ಅರ್ಥವುಳ್ಳದ್ದು. ''ಸ್ತ್ರೀಯರು ಎಂದಿಗೂ ಅಬಲೆಯರಲ್ಲ, ಅವರ ಒಳಗಿರುವ ಶಕ್ತಿ ಸಾಮರ್ಥ್ಯ ಬಿಡುಗಡೆ ಹೊಂದಲು ಅವಕಾಶ, ಬೆಂಬಲ ಸಿಕ್ಕಬೇಕು ಅಷ್ಟೆ'' ಎಂದು ಹೇಳಬಲ್ಲಷ್ಟು ಆತ್ಮವಿಶ್ವಾಸ ಇವರಲ್ಲಿ ಇಂದು ಇದೆ. ಕುಟುಂಬದ ಜನರ ಪ್ರೋತ್ಸಾಹ, ಉದ್ಯೋಗದ ಜಾಗಗಳಲ್ಲಿ ಸಹೋದ್ಯೋಗಿಗಳ ಸಹಕಾರ ಬೆಂಬಲಗಳಿದ್ದಲ್ಲಿ ಮಹಿಳೆಯರು ಎಷ್ಟು ಎತ್ತರಕ್ಕೆ ಬೇಕಾದರೂ ಏರಬಲ್ಲರು ಎಂದು ಇವರ ಅನುಭವಗಳೇ ಹೇಳುತ್ತವೆ.

ಈ ಎರಡು ಸ್ತರದ ಮಹಿಳೆಯರ ವಿಭಿನ್ನ ಸ್ಥಿತಿಗಳನ್ನು ಪರಿಶೀಲಿಸಿದರೆ ನಮ್ಮ ಮಹಿಳೆಯರ ನಡುವೆಯೇ ಶಕ್ತಿರಹಿತ ಹಾಗೂ ಶಕ್ತಿಯುತವಾದ ನೆಲೆಗಳು ಇರುವುದರ ಅರಿವಾಗಬಲ್ಲದು. ಅಲ್ಲೂ ಕೆಳಸ್ತರ / ಮೇಲುಸ್ತರ ಎಂಬ ಸ್ಥೂಲ ವಿಭಜನೆ ಸಾಮಾನ್ಯವಾಗಿ ಮಾಡಬಹುದಾದರೂ ಹೀಗೆ ನೇರ ವರ್ಗೀಕರಣಕ್ಕೆ ಒಗ್ಗಲಾರದಂಥ ರೀತಿ ಮಹಿಳೆಯರ ಸಬಲತೆ ಹಾಗೂ ಅಸಹಾಯಕತೆಗಳ ಪದರಗಳು ಹರಡಿಕೊಂಡಿರುತ್ತವೆ ಎಂಬುದನ್ನು ನಿರ್ಲಕ್ಷಿಸುವಂತಿಲ್ಲ. ಗಂಡಸರಿಗಿಂತ ಇಮ್ಮಡಿ ದುಡಿಯುವ, ಕುಟುಂಬದ ಮುಖ್ಯ ಉತ್ಪಾದಕ ಶಕ್ತಿಯೂ ಆಗಿರುವ ಎಷ್ಟೋ ರೈತಾಪಿ ಮಹಿಳೆಯರು ನಿರಕ್ಷರಿಗಳಾಗಿದ್ದರೂ ತಮ್ಮ ಗಂಡಸರಿಗಿಂತ ಹೆಚ್ಚು ಧೈರ್ಯ, ಶಕ್ತಿಗಳನ್ನು ಹೊಂದಿರುವುದುಂಟು. ತದ್ವಿರುದ್ಧವಾಗಿ, ಸಾಕಷ್ಟು ಕಲಿತಿದ್ದು, ಉದ್ಯೋಗಸ್ಥರಾಗಿದ್ದರೂ ಮನೆಯಲ್ಲೂ ಹೊರಗಡೆಯೂ ಲಿಂಗಭೇದದ ಮೂಲದ್ದಾದ ಅನೇಕ

14ನೇ ಪುಟಕ್ಕೆ

ಹೆಣ್ಣು ಮಗುವನ್ನು ಕಾಡುವ ಬಾಲ್ಯದ ಕರಿ ನೆರಳುಗಳು

ಬಲು ಮಡಿವಂತ ನಮ್ಮ ಸಮಾಜದಲ್ಲಿ ಹೆಣ್ಣು ಮಗುವಿನ ಮೇಲೆ ಮನೆಯವರಿಂದಲೇ, ಹತ್ತಿರದ ಸಂಬಂಧಿಗಳಿಂದಲೇ ನಡೆಯುವ ಅತ್ಯಾಚಾರಗಳು ಬೆಳಕಿಗೇ ಬರುವುದಿಲ್ಲ. ಅಸಹಾಯಕ ಪುಟ್ಟ ಬಾಲೆಯ ಮೇಲೆ ನಡೆಯುವ ದೈಹಿಕ ಹಿಂಸೆ, ಆ ಮಗುವಿನ ಬದುಕಿನುದ್ದಕ್ಕೂ ಕರಿ ನೆರಳನ್ನು ಚಾಚುತ್ತದೆ. ಯಾರೊಂದಿಗೂ ಹಂಚಿಕೊಳ್ಳಲಾರದ ಹೇಳಿಕೊಳ್ಳಲಾರದ ಸಾಮಾಜಿಕ ಪರಿಸರದಲ್ಲಿ ಬಾಲ್ಯದ ಕಹಿ ಅನುಭವಗಳು, ಅಸಹಾಯಕತೆ, ಭೀತಿ, ಆಕ್ರೋಶ ಎಲ್ಲದರ ಕುದಿವ ಕೊಪ್ಪರಿಗೆಯಾಗಿ ಎದೆಗೆ ಭಾರವಾಗುತ್ತದೆ. ಇತ್ತೀಚೆಗಷ್ಟೆ ಮಹಿಳೆಯರು ಇಂತಹ ವಿಷಯಗಳ ಬಗ್ಗೆ ಮಾತನಾಡತೊಡಗಿದ್ದಾರೆ, ಸಾರ್ವಜನಿಕವಾಗಿ ಹೊರಬಂದು ಚರ್ಚಿಸತೊಡಗಿದ್ದಾರೆ. ಹೆಣ್ಣಿನ 'ಶೀಲ'ದ ಬಗ್ಗೆ ಇನ್ನಿಲ್ಲದಂತೆ ಒತ್ತು ನೀಡುವ ನಮ್ಮ ಸಮಾಜದಲ್ಲಿ, ಹೆಣ್ಣೊಬ್ಬಳು ತಾನು ಅಸಹಾಯಕ ಪುಟ್ಟ ಬಾಲೆಯಾಗಿದ್ದಾಗ ನಡೆದ ಅತ್ಯಾಚಾರವನ್ನೂ ಪ್ರಕಟ ಪಡಿಸುವುದು ಸುಲಭವಲ್ಲ. ಆದರೆ ಶಿವಾನಿ ಸಕ್ಸೇನಾ ಅಂತಹ ಅಪರೂಪದ ದಿಟ್ಟ ಮಹಿಳೆ. ತನ್ನೊಳಗೇ ವರ್ಷವರ್ಷಗಳು ಒಳಗುದ್ದಿದ ನೋವು, ಆಕ್ರೋಶಕ್ಕೆ ಕಡೆಗೂ ಬಾಯಿ ಕೊಡಲು ಹೊರಟಿದ್ದಾರೆ.

ಕಳೆದ ತಿಂಗಳ 'ಸಾವಿ' ಪತ್ರಿಕೆಯಲ್ಲಿ ಶಿವಾನಿಯವರ ಕತೆ ಪ್ರಕಟವಾಗಿದೆ. 1976ರ ಇಸವಿ, ಪಂಜಾಬಿನ ಫಿರೋಜ್‌ಪುರಕ್ಕೆ ಶಿವಾನಿಯ ಕುಟುಂಬ ಬಂದು ಸೇರಿತ್ತು. ಆಕೆಯ ತಂದೆ ಡಾ. ಸುರೇಶ್ಚಂದ್ರ ಸಕ್ಸೇನ, ಭೂಸೇನೆಯ ಮೆಡಿಕಲ್ ಕಾರ್ಪ್ಸ್‌ನಲ್ಲಿ ವೈದ್ಯರಾಗಿದ್ದು, ಅವರಿಗೆ ಫಿರೋಸ್‌ಪುರಕ್ಕೆ ವರ್ಗವಾಗಿತ್ತು. ಅವರಿಗೆ ಮೂವರು ಮಕ್ಕಳು, ಇಬ್ಬರು ಗಂಡು ಮಕ್ಕಳು, ಶಿವಾನಿ ಹೆಣ್ಣುಮಗು. ಇದೇ ಫಿರೋಸ್ ಪುರಕ್ಕೆ ಕ್ಯಾಪ್ಟನ್ ಡಾ. ಅಶೋಕ್ ಚೋಪ್ರಗೆ ಕೂಡಾ ವರ್ಗವಾಗಿತ್ತು. ಶಿವಾನಿಯ ತಂದೆಯವರಿಗೆ ಜೂನಿಯರ್ ಆಫೀಸರ್ ಆಗಿದ್ದ ಚೋಪ್ರ, ಆಗಾಗ್ಗೆ ಮನೆಗೆ ಬರುತ್ತಿದ್ದರು. ಡಾ. ಚೋಪ್ರಾ ಭುವನ ಸುಂದರಿ ಪ್ರಿಯಾಂಕ ಚೋಪ್ರ ಅವರ ತಂದೆ.

ಒಂದು ದಿನ ಹನ್ನೆರಡು ವರ್ಷದ ಶಿವಾನಿ ಮನೆಯಲ್ಲಿ ಒಬ್ಬಳೇ ಇದ್ದಳು. ಕೋಣೆಯಲ್ಲಿ ಓದಿಕೊಳ್ಳುತ್ತಿದ್ದಳು. ಮನೆಯ ಒಳ ಬಂದ ಡಾ.ಚೋಪ್ರಾ ಕೋಣೆಗೆ ಪ್ರವೇಶಿಸಿ, ಬಾಗಿಲು ಹಾಕಿದ. ಏನಾಗುತ್ತಿದೆ ಎಂದು ಶಿವಾನಿಗೆ ಅರಿವಾಗುವ ಮೊದಲೇ ಈ ಬಾಲೆಯನ್ನು ಹಿಡಿದುಕೊಂಡ ಚೋಪ್ರಾ ಲೈಂಗಿಕ ದುರಾಚಾರಕ್ಕಿಳಿದ. ಬಾಲೆಯ ಬಾಯಿ ಮುಚ್ಚಿ, ಸುಮ್ಮನಿರದಿದ್ದರೆ ಕೊಂದು ಬಿಡುತ್ತೇನೆ ಎಂದು ಹೆದರಿಸಿದ. ಯಾರಿಗಾದರೂ ಈ ವಿಷಯದ ಬಗ್ಗೆ ಉಸಿರು ಬಿಟ್ಟರೂ ಕೊಂದು ಬಿಡುವುದಾಗಿ ಬೆದರಿಸಿದ. ಅಂದಿನಿಂದ ಈ ಎಳೆಯ ಹುಡುಗಿಗೆ ತನ್ನ ನೆರಳೇ ಭೀತಿ ಹುಟ್ಟಿಸುತ್ತಿತ್ತು. ಚಟುವಟಿಕೆಯ ಚುರುಕು ಹುಡುಗಿ ತಟ್ಟನೆ ಮಂಕಾದಳು, ಅವಳ ಬದುಕಿನ ಬಣ್ಣಗಳನ್ನೆಲ್ಲ ಚೋಪ್ರಾ ಕದ್ದೊಯ್ದಂತಿತ್ತು. ಮುಗ್ಧತೆಯ ಪರ್ವ ಮುಗಿದಿತ್ತು. ಆಕೆಯ ತಂದೆಗೆ ಹಿಂದಿನ ವರ್ಷ ಒಮ್ಮೆ ಹೃದಯಾಘಾತವಾಗಿತ್ತು. ಮತ್ತೆ ಇದೇ ವರ್ಷ ಈ ಪ್ರಕರಣದ ನಂತರ ಹೃದಯಾಘಾತವಾಗಿತ್ತು. ನಡೆದ ಸಂಗತಿ ತಿಳಿಸಿದರೆ, ತಂದೆ ಸತ್ತೇ ಹೋಗುತ್ತಾರೆ ಎಂಬ ಭಯ ಶಿವಾನಿಯನ್ನು ಕಾಡಿತ್ತು. ಒಳಗೊಳಗೇ ಒಳಗುದ್ದಿದ ಸಿಟ್ಟು, ಆಕ್ರೋಶ, ಅಸಹಾಯಕತೆ ಈ ಹುಡುಗಿಯ ಬಾಲ್ಯವನ್ನು ಸುಟ್ಟು ಹಾಕಿತು. ಅಲ್ಲಿಯವರೆಗೂ ಒಳ್ಳೆಯ ಅಂಕಗಳನ್ನು ತೆಗೆದುಕೊಳ್ಳುತ್ತಿದ್ದ ಶಿವಾನಿ, ಶಾಲೆಯಲ್ಲಿ ಹಿಂದೆ ಬಿದ್ದಳು.

ಈ ಪ್ರಕರಣವಾದ ಮೇಲೆ, ಡಾ. ಚೋಪ್ರಾ ಶಿವಾನಿಯ ಮನೆಗೆ ಮತ್ತೆ ಮತ್ತೆ ಬರತೊಡಗಿದ್ದರು. ಆತನನ್ನು ನೋಡಿದಾಗಲೆಲ್ಲ ಉಕ್ಕುತ್ತಿದ್ದ ಷಂಡ ಕೋಪ, ಅಸಹಾಯಕತೆ, ಶಿವಾನಿಯನ್ನು ಒಳಗೊಳಗೇ ಕುದಿಯುವಂತೆ ಮಾಡುತ್ತಿತ್ತು. ಎರಡು ವರ್ಷಗಳ ನಂತರ ಡಾ.ಸಕ್ಸೇನಾ ಫಿರೋಜ್‌ಪುರ ಬಿಟ್ಟಮೇಲೂ, ಶಿವಾನಿಯ ಕಹಿ ನೆನಪುಗಳು ಸದಾ ಅವಳಿಗೆ ಜೊತೆಯಾದವು. ಶಿವಾನಿ ಕೊಂಚ ಬೆಳೆದಂತೆ, ತನಗೇನಾಯಿತು ಎಂದು ಪೂರ್ಣ ಅರ್ಥವಾಗದಿದ್ದರೂ, ನಾಚಿಗೆ, ಹೇಸಿಗೆಯ ಭಾವ ಬೇರೂರುತ್ತಾ ಹೋಯಿತು. ಯಾರೊಬ್ಬರಲ್ಲಿಯೂ ತನ್ನ ಕಹಿ ಅನುಭವವನ್ನು ಹಂಚಿಕೊಳ್ಳಲಾಗಲಿಲ್ಲ.

1985ರಲ್ಲಿ ಶಿವಾನಿಯ ವಿವಾಹ ರಾಜೀವ್ ಸಕ್ಸೇನಾ ಜೊತೆಯಲ್ಲಿ ನಿಶ್ಚಯವಾಯಿತು. ಶಿವಾನಿ, ರಾಜೀವ್‌ಗೆ ತನ್ನ ಬಾಲ್ಯದ ಕಹಿ ಅನುಭವವನ್ನು ಹೇಳಿದಳು. ಅದರೊಡನೆ ತನ್ನೊಳಗೆ ಅಡಗಿರುವ ಭೀತಿ, ಆತಂಕಗಳನ್ನೂ ತಿಳಿಸಿದಳು. ಇವೆಲ್ಲವನ್ನು ತಿಳಿದೂ ರಾಜೀವ್ ಮದುವೆಗೆ ಒಪ್ಪಿದರು, 'ಆ ಘಟನೆ ತಮ್ಮ ಸಂಬಂಧದ ನಡುವೆ ಅಡ್ಡಗೋಡೆಯಾಗದು' ಎಂದು ಭರವಸೆ ನೀಡಿದರು. ವಿವಾಹವಾಯಿತು, ಎರಡು ಮಕ್ಕಳಾದವು. ಮುಂಬಯಿಯಲ್ಲಿದ್ದ ಸಕ್ಸೇನಾ ಕುಟುಂಬ ದುಬಾಯಿಗೆ ರವಾನೆಯಾಯಿತು. ಶ್ರೀಮಂತ ಬದುಕು. ಪ್ರೀತಿಯ ಗಂಡ, ಮಕ್ಕಳು. ಮೆರ್ಕನ್ ಟ್ರೇಡಿಂಗ್ ಕಂಪನಿಯ ನಿರ್ದೇಶಕಿಯಾಗಿ ಕೈತುಂಬ ಕೆಲಸ ಶಿವಾನಿಗೆ. ಇಂತೆಲ್ಲ ಭವ್ಯ ಬದುಕಿನ ನಡುವೆಯೂ, ಶಿವಾನಿಗೆ ತನ್ನ ಬಾಲ್ಯದ ಕರಿ ನೆರಳುಗಳು ಕಾಡುತ್ತಿದ್ದವು. ಇತ್ತೀಚೆಗಷ್ಟೆ ಶಿವಾನಿಯ ತಂದೆ ದುಬಾಯಿಗೆ ಬಂದವರು, ತಮ್ಮ ಹಿಂದಿನ ಜೂನಿಯರ್ ಆಫೀಸರ್ ಡಾ.ಚೋಪ್ರಾ ಮಗಳು ಭುವನ ಸುಂದರಿಯಾದದ್ದನ್ನು ತಿಳಿಸಿದಾಗ, ತಟ್ಟನೆ ಹಳೆಯ ಗಾಯವನ್ನು ಕೆದಕಿದಂತಾಯಿತು. ಡಾ.ಚೋಪ್ರಾ ಅವರ ಫೋಟೋ ಪತ್ರಿಕೆಗಳ ತುಂಬಾ ಕಂಡು ಬಂದಂತೆ, ಶಿವಾನಿ ಒಳಗೊಳಗೇ ತಳಮಳಿಸಿದಳು. ತನ್ನ ಲಾಯರ್ ಮೂಲಕ ಆತ ತಾನು ಮಾಡಿದ ಹೊಲಸು ಕೆಲಸಕ್ಕೆ ಖಾಸಗಿಯಾಗಿ ಕ್ಷಮೆ ಕೇಳಲು ಹೇಳಿದಳು. ಆದರೆ ಅಂತಹ ಯಾವ ಕ್ಷಮೆಯೂ ಬಾರದಾಗ, 'ಬೇಕಿದ್ದರೆ ಕೋರ್ಟಿಗೆ ಹೋಗು' ಎಂಬ ಅಹಂಕಾರದ ಉತ್ತರ ಬಂದಾಗ, ಶಿವಾನಿ ಅದನ್ನೇ ಮಾಡಲು ಸಿದ್ಧರಾದರು. 'ತನಗಾದ ನೋವು, ಅಪಮಾನ ಆತನಿಗೂ ಆಗಬೇಕು. ಸಾರ್ವಜನಿಕವಾಗಿ ಈ ಮನುಷ್ಯನಿಗೆ ಅಪಮಾನವಾಗಬೇಕು. ಇಷ್ಟು ವರ್ಷ ತಾನು ಸದ್ದಿಲ್ಲದೆ

ಅನುಭವಿಸಿದ್ದೇನೆ. ಇಂದು ಕೂಡಾ ವಿಪರೀತ ಭೀತಿಗೆ ಬಲಿಯಾಗಿದ್ದೇನೆ, ತನ್ನ ಪುಟ್ಟ ಮಕ್ಕಳಿಗೆ ಏನೋ ಆಗಿಬಿಡುವುದು ಎಂಬ ತೀವ್ರ ಭಯ ತನ್ನನ್ನು ಸದಾ ಕಾಡುತ್ತದೆ, ತನ್ನ ನಾರ್ಮಲ್ ಬದುಕಿಗೆ ಅಡ್ಡಿಯಾಗಿ ನಿಲ್ಲುತ್ತದೆ' ಎನ್ನುವ ಶಿವಾನಿ, ಚೋಪ್ರಾ ಅವರ ಕೃತ್ಯ ತನ್ನ ಬದುಕನ್ನೇ ಬದಲಿಸಿಬಿಟ್ಟಿತು ಎಂದು ವಿವರಿಸಿದ್ದಾರೆ.

ಇದಿಷ್ಟು ಶಿವಾನಿ 'ಸಾವಿ' ಪತ್ರಿಕೆಗೆ ಹೇಳಿದ ಕತೆ. 'ಸಾವಿ' ಪತ್ರಿಕೆ ಈ ಕತೆಯನ್ನು ಪ್ರಕಟಿಸುವ ಮೊದಲೇ ಡಾ. ಚೋಪ್ರಾ ಅವರನ್ನು ಭೇಟಿಯಾಗಿದೆ. 'ನೀವು 1976ರಲ್ಲಿ ಫಿರೋಜ್‌ಪುರದಲ್ಲಿದ್ದಿರಾ?' ಎಂಬ ಪ್ರಶ್ನೆಗೆ ಆತ 'ನನಗೆ ದೇಶದ ಉದ್ದಗಲಕ್ಕೂ ವರ್ಗವಾಗಿತ್ತು... ಅಂಬಾಲ, ಉಧಾಮಪುರ್...' ಎಂದರೇ ಹೊರತು 'ಹೌದು, ಇಲ್ಲ' ಎಂದು ನಿಖರವಾಗಿ ಉತ್ತರಿಸಲಿಲ್ಲ. ಆಕೆಗೆ ಹಣ ಬೇಕಿದ್ದರೆ, ಹಣ ಮಾಡಲು ಬಹಳಷ್ಟು ಮಾರ್ಗಗಳಿವೆ, ಇದು ಹಣ ಮಾಡುವ ರೀತಿಯಲ್ಲ' ಎಂದು ಗುಡುಗಿದ್ದರು. ಶ್ರೀಮಂತ ಜೀವನ ನಡೆಸುತ್ತಿರುವ ಶಿವಾನಿಗೆ 'ಇದು ಹಣಮಾಡುವ ಮಾರ್ಗ'ವಾಗಿಲ್ಲ ಎನ್ನುವುದಂತೂ ಸ್ಪಷ್ಟವಾಗಿದೆ. ಕಾರಣ, ಶಿವಾನಿ 'ನಮಗೆ ಹಣ ಬೇಕಿಲ್ಲ. ಈ ಕೇಸಿನಿಂದ ಪರಿಹಾರವೇನಾದರೂ ದೊರೆತರೆ, ಅಷ್ಟೇ ಮೊತ್ತದ ಹಣವನ್ನು ನಾವು ಸೇರಿಸಿ, ಲೈಂಗಿಕವಾಗಿ ಶೋಷಣೆಗೆ ಒಳಗಾದ ಮಕ್ಕಳ ಚಾರಿಟಿಗೆ ನೀಡುತ್ತೇವೆ' ಎಂದಿದ್ದಾರೆ.

ಇದಿಷ್ಟು ಕತೆ ಕಳೆದ ತಿಂಗಳ 'ಸಾವಿ'ಯಲ್ಲಿ ಪ್ರಕಟವಾಯಿತು. ಇದನ್ನು ಓದಿದ ಡಾ.ಚೋಪ್ರಾ 'ಶಿವಾನಿ ಸಕ್ಸೇನಾ ಹೇಳುತ್ತಿರುವುದೆಲ್ಲ ಶುದ್ಧ ಸುಳ್ಳು, ಸುದ್ದಿ ಮಾಡಿ ಪ್ರಸಿದ್ಧಿ ಗಳಿಸುವ ಸಲುವಾಗಿ ತನ್ನ ಹೆಸರಿಗೆ ಕೆಸರು ಮೆತ್ತಿದ್ದಾರೆ. ಆಕೆ ಹೇಳಿರುವುದೆಲ್ಲ ಆಕೆಯ ಕಲ್ಪನೆ. ಆಕೆ ಕೆಟ್ಟ ಉದ್ದೇಶದ ಮತ್ಯಾರೋ ಪಟ್ಟ ಭದ್ರ ಹಿತಾಸಕ್ತರ ಕೈಗೊಂಬೆಯಾಗಿದ್ದಾಳೆ. ಇಪ್ಪತ್ತೈದು ವರ್ಷ ಆದಮೇಲೆ ಈ ವಿಷಯವನ್ನು ಎತ್ತಿರುವುದು, ನನ್ನ ಮತ್ತು ನನ್ನ ಕುಟುಂಬವನ್ನು ಸಾರ್ವಜನಿಕವಾಗಿ ಅಪಮಾನಗೊಳಿಸುವ ಉದ್ದೇಶದಿಂದ ಮಾತ್ರ. ನಿಮ್ಮ ಪತ್ರಿಕೆ, ಪೀತ ಪತ್ರಿಕೆಯಂತೆ ಪ್ರಕಟಿಸುವುದನ್ನು ನಾನು ನಿರೀಕ್ಷಿಸಿರಲಿಲ್ಲ, ಕ್ಷಮೆ ಯಾಚಿಸಿ, ಮುದ್ರಿಸಿ' ಎಂದು ಬರೆದರು.

'ನಿಜಕ್ಕೂ ಶಿವಾನಿ ಹೇಳುತ್ತಿರುವುದು ಪಬ್ಲಿಸಿಟಿಗಾಗಿಯೆ' ಎಂಬ ಪ್ರಶ್ನೆ ಯಾರ ತಲೆಯಲ್ಲಾದರೂ ಮೂಡುತ್ತದೆ. ಆದರೆ ದುಬಾಯಿಯಲ್ಲಿ, ಸಕಲ ಐಷಾರಾಮ, ಶ್ರೀಮಂತಿಕೆಯಲ್ಲಿ ಆರಾಮವಿರುವ, ಗಂಡ- ಮಕ್ಕಳಿರುವ 37ರ ಮಹಿಳೆ ಇಂತಹ ಹೇಳಿಕೆಗಳಿಂದ ಎಂತಹ ಪ್ರಸಿದ್ಧಿ ಪಡೆಯಲು ಸಾಧ್ಯ? ಎಂಬ ಪ್ರಶ್ನೆಯೂ ಅಷ್ಟೇ ಸಹಜವಾಗಿ ಮೂಡುತ್ತದೆ. ನಾವಿರುವ ಸಮಾಜವೇನೂ ಹೆಣ್ಣಿನ ಈ ಅಳಲಿಗೆ ಸುಲಭವಾಗಿ ಕಿವಿಗೊಡುವಂತಹುದಲ್ಲ. ವಯಸ್ಸಾದ ತಂದೆ ತಾಯಿ, ಅತ್ತೆ ಮಾವ, ದೊಡ್ಡ ಕುಟುಂಬ, ಬೆಳೆಯುತ್ತಿರುವ ಮಕ್ಕಳು ಎಲ್ಲರ ಮುಂದೆ ಈಕೆ ಈ ಘಟನೆಯನ್ನು ಬಿಚ್ಚಿ ತೆಗೆದಿಡುವುದರಿಂದ, ಆಕೆ ಕಳಕೊಳ್ಳುತ್ತಿರುವುದೇ ಹೆಚ್ಚಿದೆ. ಇದರಿಂದ ಆಕೆ ಪಡೆಯುವುದಾದರೆ ಬಹುಶಃ ತಮ್ಮ ಒಳಗೆ ಕುದಿದ ಆಕ್ರೋಶದಿಂದ ಬಿಡುಗಡೆ ಮಾತ್ರ ಎನಿಸುತ್ತದೆ. ಶಿವಾನಿ ಇದೀಗ ಡಾ. ಚೋಪ್ರಾ ಅವರ ಮೇಲೆ ಕೇಸು ದಾಖಲಿಸಿದ್ದಾರೆ. ಶಿವಾನಿ ಈ ತಿಂಗಳ 'ಸಾವಿ' ಪತ್ರಿಕೆಯಲ್ಲಿ ವಿವರಿಸಿರುವ ಹಾಗೆ 'ತಾನು ಇಷ್ಟು ಮುಂದುವರೆಯಲು ಇರುವ ಒಂದೇ ಕಾರಣ, ನನ್ನಂತಹ ಪರಿಸ್ಥಿತಿಯಲ್ಲಿರುವ ಮಹಿಳೆಯರು ಇಂತಹ ಹೇಯ ಕೃತ್ಯವನ್ನು ಅಡಗಿಸಿಡುವ ಬದಲು ಮುಗ್ಧ ಮಕ್ಕಳ ಬಾಲ್ಯವನ್ನು ನಂದಿಸುವ ಇಂತಹ ಗಂಡಸರ ಕೃತ್ಯಗಳ ಮೇಲೆ ಬೆಳಕು ಚೆಲ್ಲಲು ಮುಂದೆ ಬರಬಹುದು ಎಂಬ ನಂಬುಗೆ ಎನ್ನುತ್ತಾರೆ.

ಹೆಣ್ಣಿನ ಮೇಲೆ ನಡೆಯುವ ಬಹಳಷ್ಟು ಕೃತ್ಯಗಳು, ಅತ್ಯಾಚಾರವೂ ಸೇರಿದಂತೆ, ಸಮಾಜದ ಭೀತಿಯಿಂದಾಗಿ ಹೆಣ್ಣಿನಿಂದಲೇ ಮುಚ್ಚಲ್ಪಡುತ್ತವೆ. ಬಲಿಯಾದ ವ್ಯಕ್ತಿ ತನ್ನ ತಪ್ಪಿಲ್ಲದಿದ್ದರೂ ಅಪಮಾನದಿಂದ ಮುದುಡಿ ಹೋಗುತ್ತಾಳೆ. ಅತ್ಯಾಚಾರ, ಅನಾಚಾರವೆಸಗಿದ ವ್ಯಕ್ತಿ ದರ್ಪದಿಂದ ದುರಹಂಕಾರದಿಂದ ಸಮಾಜದಲ್ಲಿ ತಲೆಯೆತ್ತಿ ನಡೆಯುತ್ತಾನೆ, ತನ್ನ ಮುಂದಿನ ಬಲಿಯನ್ನು ಹುಡುಕುತ್ತಾನೆ. ಶಿವಾನಿ ಹೇಳುವ ಕತೆ ದಿಟವೆಂದಾದರೆ, ಆಕೆಯ ದಿಟ್ಟತನವನ್ನು, ಕೈಗೆತ್ತಿಕೊಂಡಿರುವ ಕಷ್ಟದ ಕೆಲಸವನ್ನು ಖಂಡಿತಾ ಶ್ಲಾಘಿಸಬೇಕು.

ಒಮ್ಮೆ ತನ್ನೊಳಗಿನ ಈ ಕಪ್ಪು ಸತ್ಯವನ್ನು ಹೊರಹಾಕಿದ ಶಿವಾನಿ ತನ್ನ ಭೀತಿ, ಆತಂಕಗಳನ್ನೆಲ್ಲ ಉಚ್ಚಾಟಿಸಿ, ತನ್ನ ತಲೆಯಲ್ಲಿ ಸದಾ ಗುನುಗುನಿಸಿದ ಸದ್ದುಗಳಿಂದ ಮುಕ್ತಿ ಪಡೆಯಲು ಬಯಸಿದ್ದಾರೆ. ಶಿವಾನಿ ಹಿಡಿದಿರುವ ಹಾದಿ ಸುಗಮವಾದದ್ದಲ್ಲ. ಬಹುಶಃ ಯಾವ ಭಾರತೀಯ ಹೆಣ್ಣೂ ನಡೆಯದಿದ್ದ ಹಾದಿಯಲ್ಲಿ ಹೊರಟಿದ್ದಾರೆ. ಇಪ್ಪತ್ತೈದು ವರ್ಷಗಳ ಹಿಂದೆ ನಡೆದಿರಬಹುದಾದ ಘಟನೆಯನ್ನು ಸಾಬೀತು ಮಾಡುವುದೂ ಶಿವಾನಿಗೆ ಸುಲಭದ್ದಲ್ಲ. ಆದರೂ ಈ ಕೇಸು ಹೆಣ್ಣು ಮಗುವಿನ ಮೇಲೆ ನಮ್ಮ ಸಮಾಜದಲ್ಲಿ ಸದ್ದಿಲ್ಲದೆ ನಡೆಯುವ ಲೈಂಗಿಕ ಶೋಷಣೆಯತ್ತ ಬೆಳಕು ಚೆಲ್ಲಬಲ್ಲದು. ತಂದೆತಾಯಿಯರಿಗೆ ಹೆಚ್ಚು ಜಾಗೃತವಾಗಲು ಪ್ರೇರೇಪಿಸಬಲ್ಲದು. ಹೆಣ್ಣು ಮಕ್ಕಳು ತಮ್ಮ ದೇಹದ ಮೇಲಾಗುವ ಅತ್ಯಾಚಾರವನ್ನು ಸದ್ದಿಲ್ಲದೆ ಅನುಭವಿಸದೆ, ಪ್ರತಿಭಟಿಸುವಂತೆಯೂ ಪ್ರೋತ್ಸಾಹಿಸಬಲ್ಲದು. ನಮ್ಮ ಸಮಾಜದಲ್ಲಿ ಹೆಣ್ಣು ಬಾಯಿ ಬಿಡುವುದಿಲ್ಲ ಎಂಬ ಗಟ್ಟಿ ನಂಬುಗೆಯಲ್ಲಿ ನಿರಾತಂಕವಾಗಿ ನಡೆಯುವ ವಿಕೃತ ಗಂಡುಗಳ ಅಟ್ಟಹಾಸ ಸ್ವಲ್ಪವಾದರೂ ತಗ್ಗಬಹುದು. ಏನೇ ಇರಲಿ, ಶಿವಾನಿಯ ಈ ಕೇಸು, ಸಮಾಜದ ಗಮನವನ್ನು ಮುಸುಕಿನಡಿಯ ಅಪರಾಧದತ್ತ ಸಮರ್ಥವಾಗಿ ಸೆಳೆಯುವುದಂತೂ ನಿಜ.

ಅಂದಹಾಗೆ 'ಸಾವಿ' ಪತ್ರಿಕೆ ಡಾ.ಚೋಪ್ರಾ ಅವರ ಪತ್ರವನ್ನು ಪ್ರಕಟಿಸಿದೆ, ಆದರೆ ಅವರು ಕೇಳಿದಂತೆ 'ಕ್ಷಮೆ ಕೋರಿಲ್ಲ', ಬದಲು 'ವಿ ಸ್ಟಾಂಡ್ ಬೈ ಅವರ್ ಸ್ಟೋರಿ' ಎಂದು ಸಂಪಾದಕರು ನಮೂದಿಸಿದ್ದಾರೆ.

- ನೇಮಿಚಂದ್ರ

★ ★ ★ ★

ಕಥೆಯಾದಳು ಸಾವಿತ್ರಿ

ತಮಿಳುನಾಡಿನಲ್ಲಿ ಪ್ರತಿ ವರ್ಷ ಸುಮಾರು ಮೂರು ಸಾವಿರದಷ್ಟು ಸ್ತ್ರೀ ಭ್ರೂಣಹತ್ಯೆ ಪ್ರಕರಣಗಳು ವರದಿಯಾಗುತ್ತಿವೆ. ಇವುಗಳಲ್ಲಿ ಧರ್ಮಪುರಿಯಲ್ಲಿಯೇ 1,119 ಪ್ರಕರಣಗಳು ನಡೆದಿವೆ.

ಸಾವಿತ್ರಿ ಅಂಥ ದುರಾದೃಷ್ಟದಿಂದ ಪಾರಾದಳು. ಅವಳು ತನ್ನ ಮೂವರು ಸೋದರಿಯರು ಮತ್ತು ಒಬ್ಬ ಸೋದರನ ಜೊತೆ ಬೆಳೆದಳು. ಅವರೊಂದಿಗೆ ಶಾಲೆಗೆ ಹೋದಳು. ಹಿರಿಯರ ಮುಂದೆ ತಗ್ಗಿ ಬಗ್ಗಿ ನಡೆಯಬೇಕು, ಗಂಡನೇ (ಚಿನ್ನದ ರಥದಲ್ಲಿ ಅವನು ಬಂದಾಗ) ಅವಳಿಗೆ ದೇವರು ಮತ್ತು ಗಂಡನ ಮನೆಯೇ ಅವಳಿಗೆ ಸ್ವರ್ಗ ಎಂದು ಪದೇ ಪದೇ ಅವಳಿಗೆ ಹೇಳಲಾಗುತ್ತಿತ್ತು.

ಸಾವಿತ್ರಿಯ ತಾಯಿಯ ಹಳ್ಳಿಯಲ್ಲಿ ಅನೇಕ ಮಂದಿ ಹೆಣ್ಣು ಮಕ್ಕಳನ್ನು 'ಸಾಯಿಸಲು' ತಮ್ಮದೇ ವಿಧಾನಗಳನ್ನು ರೂಪಿಸಿಕೊಂಡಿದ್ದರು. ಟೇಬಲ್ ಫ್ಯಾನ್ ಮುಂದೆ ಮಗುವನ್ನು ಕೆಲ ಸಮಯ ಹಿಡಿದು ಅದು ಉಸಿರಾಡದಂತೆ ಮಾಡುವುದು; ಒದ್ದೆ ಬಟ್ಟೆಯಲ್ಲಿ ಮಗುವನ್ನು ಗಟ್ಟಿಯಾಗಿ ಸುತ್ತುವುದು ಅಥವಾ ಖಾರದ ಚಿಕನ್ ಸೂಪನ್ನು ಮಗುವಿಗೆ ನೀಡುವುದು ಅಥವಾ ಆಹಾರಕೊಡದೆ ಹಸಿವಿನಿಂದ ಸಾಯಿಸುವುದು. ನಂತರ ಒಂದು 25 ರೂಪಾಯಿ ಕೊಟ್ಟು ಬಿಟ್ಟರೆ ಕಸ ಗುಡಿಸುವವರು ಸತ್ತ ಮಗುವನ್ನು ಒಯ್ದು ಬಿಡುತ್ತಿದ್ದರು. ಆದರೆ ಸಾವಿತ್ರಿಯ ತಾಯಿ ಅಂಥದನ್ನು ಎಂದೂ ಯೋಚಿಸಲಿಲ್ಲ. ಅವರ ಮನೆಗೆ ಬರುವ ಬಂಧುಗಳು ಅವಳಿಗಿರುವ ಹೆಣ್ಣುಮಕ್ಕಳ ಸಂಖ್ಯೆ ಬಗೆಗೆ ವ್ಯಂಗ್ಯ ವಾಡುತ್ತಿದ್ದರು. 'ನನ್ನ ಹೆಣ್ಣು ಮಕ್ಕಳೇ ನನಗೆ ಲಕ್ಷ್ಮಿಯರು' ಎಂದು ಅಮ್ಮ ತನ್ನ ಬಂಧುಗಳ ಬಾಯಿ ಮುಚ್ಚಿಸುತ್ತಿದ್ದರು.

ಮೂರು ಹೆಣ್ಣು ಮಕ್ಕಳಲ್ಲಿ ಸಾವಿತ್ರಿಯೇ ಹೆಚ್ಚಿನ ಸುಂದರಿ. ಹೀಗಾಗಿ ಬಹುಬೇಗ ಅವಳ ಮದುವೆಯಾಗಿ ಹೋಯಿತು. 'ಸುಂದರ ಸೊಸೆ'ಗಾಗಿ ಹಾತೊರೆಯುತ್ತಿದ್ದ ದಂಪತಿಯೊಬ್ಬರ ಎಂಜನೀಯರ್ ಮಗ ಸಾವಿತ್ರಿಯನ್ನು ಮದುವೆಯಾದ. ಈ ದಂಪತಿಗೆ ಮೊಮ್ಮಗನೇ ಬೇಕಾಗಿತ್ತು. ಸಾವಿತ್ರಿ ತನ್ನ ಹೊಸ ಮನೆಗೆ ಬಂದಾಗ ಅವಳ ಅತ್ತೆ ತನಗೆ ಮೊಮ್ಮಗ ಬೇಕೆಂದು ಹಲವು ಹತ್ತು ಬಾರಿ ಹೇಳಿದರು.

ಮಧುರೈಯಲ್ಲಿ 1991ರ ಜನಗಣತಿಯಂತೆ ತೋರಿಬಂದ ಲಿಂಗ ಪ್ರಮಾಣ ಒಂದು ಸಾವಿರ ಪುರುಷರಿಗೆ 918 ಸ್ತ್ರೀಯರು ಎಂದಿತ್ತು. 1981ರ ಅಖಿಲ ಭಾರತ ಪ್ರಮಾಣವು 1000 ಪುರುಷರಿಗೆ 933 ಮಹಿಳೆಯರು. 1991ರ ವೇಳೆಗೆ ಅದು 918ಕ್ಕೆ ಇಳಿದಿತ್ತು. 1998ರ ನವೆಂಬರ್‌ನಲ್ಲಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯೊಂದು ಮಧುರೈನ ಉಸಿಲಾಂಪಟ್ಟಿಯಲ್ಲಿ ನಡೆಸಿದ ಸಮೀಕ್ಷೆಯಂತೆ ಸ್ತ್ರೀ-ಪುರುಷರ ಪ್ರಮಾಣ 879 ರಿಂದ 880. (ಪ್ರತಿ1000 ಪುರುಷರಿಗೆ). ಅಭ್ಯುದಯದ ನಕ್ಷೆಯಲ್ಲಿರುವ ಹರಿಯಾಣದಲ್ಲಿ ಅಲ್ಟ್ರಾ ಸ್ಕ್ಯಾನ್ ಪರೀಕ್ಷೆಗಳು ಸುಲಭವಾಗಿ ನಡೆಯುತ್ತಿದ್ದು, ಅಲ್ಲಿ ಪ್ರತಿ 1000 ಹುಡುಗರಿಗೆ 750 ಹುಡುಗಿಯರಿದ್ದಾರೆ.

ಸಾವಿತ್ರಿಗೆ ಮದುವೆಯಾಗಿ ಎರಡು ತಿಂಗಳುಗಳಾಗಿವೆ. ತಾನು ಗರ್ಭಿಣಿ ಎಂದವಳಿಗೆ ತಿಳಿದಿದೆ. 'ಇದು ಖಂಡಿತ ಮಗನೇ ಆಗಿರಬೇಕು' ಎಂದು ಅವಳ ಅತ್ತೆ ಪ್ರತಿದಿನ ಹೇಳುತ್ತಿದ್ದಳು. 'ಅಮ್ಮನಿಗೆ ನೀನು ನಿರಾಸೆ ಉಂಟು ಮಾಡಬಾರದು' ಎಂದು ಅವಳ ಎಂಜನಿಯರ್ ಗಂಡ ಹೇಳುತ್ತಿದ್ದ. ಇದನ್ನೆಲ್ಲ ಅಮ್ಮನಿಗೆ ಹೇಳಿದರೆ, 'ನಿನಗೆ ನಿನ್ನ ಗಂಡನೇ ದೇವರು. ಅವನು ಹೇಳಿದಂತೆ ಕೇಳು' ಎಂದು ಉಪದೇಶ ಸಿಗುತ್ತಿತ್ತು.

ಹೊಟ್ಟೆಯಲ್ಲಿರುವ ಮಗುವಿನ ಲಿಂಗ ತಿಳಿಸಲು ಸ್ಕ್ಯಾನ್ ಕ್ಲಿನಿಕ್‌ಗಳು 150ರೂಪಾಯಿ ಬಿಲ್ ಮಾಡುತ್ತವೆ. ಗರ್ಭಪಾತಕ್ಕೆ 1000ದಿಂದ 3000 ರೂಪಾಯಿಗಳಾಗುತ್ತದೆ. ಉತ್ತರ ಭಾರತದಲ್ಲಿ, ಅದರಲ್ಲಿಯೂ ಅಭ್ಯುದಯದ ಪಂಜಾಬಿನಲ್ಲಿ ಈ ದರ ಇನ್ನೂ ಹೆಚ್ಚು, ಸಾವಿರಾರು ರೂಪಾಯಿಗಳಷ್ಟು. ಅಷ್ಟು ಹಣ ನೀಡಲು ಸಮರ್ಥರಾಗಿಲ್ಲದಿರುವವರಿಗೆ ಬೇರೆ ಬೇರೆ ವಿಧಾನಗಳಿವೆ. ವಿಷಪೂರಿತ ಗಿಡದ ಕಡ್ಡಿಯನ್ನು ತೂರಿಸಿದರೆ ಸಾಕು ಅಥವಾ ಎರಡು ಲೋಟ ನೀರಿನಲ್ಲಿ ಎರಡು ಕೆಜಿ ಸಕ್ಕರೆ ಬೆರೆಸಿ ಕುಡಿಸುವುದು. ಅಯ್ದು ಗರ್ಭಪಾತವು ಪೀಟರ್ ಡಯಾಗ್ನೊಸ್ಟಿಕ್ ಟೆಕ್ನಿಕ್‌ಗಳ (ದುರುಪಯೋಗ) ಕಾಯ್ದೆ (1994) ಪ್ರಕಾರ ಅಪರಾಧವೆನಿಸಿಕೊಳ್ಳುತ್ತದೆ.

ತನ್ನ ದೇವರನ್ನು ನಿರಾಸೆಗೊಳಿಸುವುದು ಸಾವಿತ್ರಿಗೆ ಇಷ್ಟವಿರಲಿಲ್ಲ. ತನಗೇ ಮಗನೇ ಆಗಲೆಂದು ಹೇಳಿಕೊಳ್ಳುತ್ತಿದ್ದಳು. ಅವಳ ನೆರೆಯ ಮನೆಯ ಮಹಿಳೆ ಅವಳ ನೆರವಿಗೆ ಬಂದಳು. ಅಲ್ಟ್ರಾಸೌಂಡ್ ಸ್ಕ್ಯಾನ್

ಕ್ಲಿನಿಕ್‌ಗಳ ಬಗೆಗೆ ವಿವರಿಸಿ ಹೇಳಿದಳು. ಸಾವಿತ್ರಿ ತನ್ನ ಎಂಜನಿಯರ್ ಗಂಡನಿಗೆ ಈ ವಿಷಯ ತಿಳಿಸಿದಳು.

ಸ್ಕ್ಯಾನ್ ಮಾಡಿದಾಗ ಸಾವಿತ್ರಿ ಹೊಟ್ಟೆಯಲ್ಲಿ ಗಂಡು ಭ್ರೂಣವಿದೆಯೆಂದು ತಿಳಿದು ಬಂದಿತು. ತನ್ನ ಎಂಜನಿಯರ್ ಗಂಡ ಮತ್ತು ಕುಟುಂಬವನ್ನು ತಾನು ನಿರಾಸಗೊಳಿಸಲಿಲ್ಲವೆಂಬ ಸಮಾಧಾನದ ಜೊತೆಗೆ ತಾನು 'ಪಾರಾದೆ' ಎಂದು ಕೊಂಡಳು, ಸಾವಿತ್ರಿ. ತನ್ನ 'ಸ್ವರ್ಗ'ದಲ್ಲಿ ಸಾವಿತ್ರಿ ದೃಢ ಹೆಜ್ಜೆ ಊರಿದಂತಾಯಿತೆಂದು ಅವಳ ತಂದೆ-ತಾಯಿ ಸಮಾಧಾನದ ಉಸಿರು ಬಿಟ್ಟರು. ಸಾವಿತ್ರಿಯ ಅತ್ತೆ ಸಿಹಿ ಹಂಚಿ ದೇವರಿಗೆ ಏಳು ತೆಂಗಿನಕಾಯಿ ಒಡೆದರು.

> ಗರ್ಭ ಮತ್ತು ಪ್ರಸೂತಿ ಸಂಬಂಧಿತ ಸಮಸ್ಯೆಗಳಿಂದಾಗಿ ಪ್ರತಿವರ್ಷ ಒಂದು ಲಕ್ಷಕ್ಕೂ ಹೆಚ್ಚು ಭಾರತೀಯ ಮಹಿಳೆಯರು ಸಾಯುತ್ತಿದ್ದಾರೆ. ಉತ್ಪಾದನಾ ವಯೋಮಾನ (ಶಿಶು ಜನನ) ಸಾಯುವ ಮಹಿಳೆಯರ ಸಂಖ್ಯೆಯೂ ಹೆಚ್ಚಾಗಿದೆ. ಗರ್ಭಿಣಿಯರಲ್ಲಿ ಶಕ್ತಿ ಹೀನತೆ ಒಂದು ಪ್ರಮುಖ ಕಾರಣವಾಗಿದೆ. ಸರಿಯಾದ ಆಹಾರ ಸೇವನೆ ಇಲ್ಲದೆ ಹಾಗೂ ಚಿಕ್ಕ ಪ್ರಾಯದಲ್ಲಿ ಗರ್ಭಿಣಿಯರಾಗುವುದೂ ಇದಕ್ಕೆ ಕಾರಣ.

ಸಾವಿತ್ರಿ ಅದೃಷ್ಟವಂತೆ. ಗರ್ಭಿಣಿ ಸೊಸೆಯನ್ನು ಚೆನ್ನಾಗಿ ನೋಡಿಕೊಳ್ಳುವ ಅತ್ತೆ ಅವಳಿಗಿದ್ದಳು. ಈ ಸುಂದರ ಸೊಸೆ ವಂಶೋದ್ಧಾರಕನನ್ನು ನೀಡುವ ದಿನಕ್ಕಾಗಿ ಎಲ್ಲರೂ ಕಾತುರದಿಂದ ಕಾದರು.

ಮದುವೆ ನಂತರದ ಮೊದಲ ದೀಪಾವಳಿ, ಪೊಂಗಲ್ ಸಮೀಪಿಸುತ್ತಿತ್ತು. ಈ ಸಮಯದಲ್ಲಿ ಸಾವಿತ್ರಿಯು ತೌರುಮನೆಯಿಂದ ಪಾತ್ರೆ, ಅಕ್ಕಿ, ಹಣ್ಣು, ಸಿಹಿ, ಬಟ್ಟೆಬರೆ ಎಲ್ಲಾ ಬರಬೇಕಲ್ಲಾ?

ಆದರೆ ಈ ದೀಪಾವಳಿ ಸಾವಿತ್ರಿ ಕುಟುಂಬ ನಿರೀಕ್ಷಿಸಿದಂತಹ ಸಿಹಿ ದೀಪಾವಳಿಯಾಗಲಿಲ್ಲ. ದೀಪಾವಳಿಗೆ ಮುನ್ನಾದಿನ ಸಾವಿತ್ರಿ ಹೆಣ್ಣು ಮಗುವಿಗೆ ಜನ್ಮವಿತ್ತಳು. ಸ್ಕ್ಯಾನ್ ಪರೀಕ್ಷೆಯಲ್ಲಿ ಏನೋ ಎಡವಟ್ಟಾಗಿರಬಹುದು.

ಉತ್ತರ ಪ್ರದೇಶದಲ್ಲಿ ವರದಕ್ಷಿಣೆ ಸಾವಿನ ಪ್ರಕರಣಗಳು ಹೆಚ್ಚು. ಬಿಹಾರ್, ಮಧ್ಯಪ್ರದೇಶ, ಪಂಜಾಬ್ ಮತ್ತು ಹರಿಯಾಣಗಳಲ್ಲಿ ಕೂಡ ಅದೇನೂ ಕಡಿಮೆ ಏನಿಲ್ಲ. ಪ್ರತಿವರ್ಷ ಸುಮಾರು 5000 ವರದಕ್ಷಿಣೆ ಸಾವುಗಳು ಬಗೆಗೆ ವರದಿಯಾಗುತ್ತಿವೆ. ವರದಿಯಾಗದ್ದು ಎಷ್ಟೋ.

ಸಾವಿತ್ರಿ ಮನೆಯಲ್ಲಿ ಅದು ಕರಾಳ 'ದೀಪಾವಳಿ' ಬಹುಶಃ ಕತ್ತಲನ್ನು ತೊಲಗಿಸಲು ಮತ್ತು ಅಪರಾಧ ಪ್ರಜ್ಞೆಯಿಂದ ಪಾರಾಗಲು ಮರುದಿನ ರಾತ್ರಿ ಮಗುವಿಗೆ ಬೆಂಕಿ ಹಚ್ಚಿ ತಾನೂ ಬೆಂಕಿ ಹಚ್ಚಿಕೊಂಡು ಸಾಯಲು ಸಾವಿತ್ರಿ ನಿರ್ಧರಿಸಿದಳು.

ಮಗು ತಕ್ಷಣ ಸತ್ತಿತು. ಆದರೆ ಸಾವಿತ್ರಿ ಸಾಯಲಿಲ್ಲ. ಬೆಂಕಿಯಿಂದ ಮಗುವನ್ನು ಉಳಿಸಲು ಸಾವಿತ್ರಿ ಎಷ್ಟು ಪ್ರಯತ್ನ ಮಾಡಿದ್ದಳೆಂದರೆ ಆಕಸ್ಮಿಕವಾಗಿ ಮಗು ಉಸಿರಾಟದಲ್ಲಿ ಸತ್ತಿದೆ ಎಂದು ವೈದ್ಯರು ಅಭಿಪ್ರಾಯ ಪಟ್ಟರು.

ಸಾವಿತ್ರಿಯ ಅತ್ತೆ ಮನೆಯವರು ಅವಳನ್ನು ಆಸ್ಪತ್ರೆಯಿಂದ ನೇರವಾಗಿ ತೌರೂರಿಗೆ ಕಳುಸಹಿಸಿ ಬಿಟ್ಟರು. ಅರ್ಧ ಸುಟ್ಟ ಸೊಸೆ ಅವರಿಗೆ ಬೇಕಾಗಿರಲಿಲ್ಲ. ಅವಳ ಎಂಜನಿಯರ್ ಗಂಡನಿಗೆ ವಿವಾಹ ವಿಚ್ಛೇದನ ಬೇಕೆಂದು ಅತ್ತೆ-ಮಾವ ಸಾವಿತ್ರಿಯ ತಂದೆ-ತಾಯಿಗೆ ತಿಳಿಸಿದರು. ಸುಂದರ ಸಾವಿತ್ರಿಯ ಗಂಡ ಮತ್ತೊಬ್ಬ ಸುಂದರಿಯನ್ನು ಕರೆತರಬೇಕಲ್ಲ...?

ತಾಯಿಯ ಮನೆಯಲ್ಲಿ ಸಾವಿತ್ರಿ ಎಲ್ಲಾ ಕೆಲಸವನ್ನೂ ಮಾಡಬೇಕಾಗಿತ್ತು. ತಾಯಿ ಮಾತ್ರ ಸದಾ ಅವಳ ಅದೃಷ್ಟದ ಬಗೆಗೆ ಗೊಣಗುತ್ತಿದ್ದಳು. ''ಅಯ್ಯೋ? ನನ್ನ ಇಬ್ಬರು ಹೆಣ್ಣು ಮಕ್ಕಳ ಮದುವೆಯನ್ನು ನಾನು ಹೇಗೆ ಮಾಡಲಿ?'' ಎಂದು ತಾಯಿ ಇಡೀ ದಿನ ಕೂಗಾಡುತ್ತಿದ್ದಳು. ಅವರು ಎಳೆಯವರಾಗಿದ್ದಾಗಲೇ ಮದುವೆ ಮಾಡಿಬಿಡಬೇಕೆಂಬ ಊರಿನವರ ಮಾತನ್ನು ಕೇಳದೆ ತಪ್ಪು ಮಾಡಿ ಬಿಟ್ಟೆ' ಎಂದವಳು ನಿಟ್ಟುಸಿರು ಬಿಡುತ್ತಿದ್ದಳು.

ಸಾವಿತ್ರಿಗೆ ವಿಪರೀತ ಕೆಲಸ. ಬಟ್ಟೆ ಒಗೆಯುವುದು, ಪಾತ್ರೆ ತೊಳೆಯುವುದು ಹಾಗೂ ಗೋಡೆಯಿಂದ ಗೋಡೆಗೆ, ಮನೆಯ ಮೂಲೆ ಮೂಲೆಯನ್ನು ಒರೆಸಿ ಒರೆಸಿ ಲಕ ಲಕ ಹೊಳೆಯುವಂತೆ ಮಾಡುವುದು... ಊಟ ಮಾತ್ರ ಎಲ್ಲರದೂ ಆದಮೇಲೆ ಆಗಲೂ ತಾಯಿ ಕಿರುಚುತ್ತಿದ್ದಳು; 'ನೋಡು, ಹೇಗೆ ತಿನ್ನುತ್ತಾಳೆ! ಈ ಭಾರ ಯಾವಾಗ ಇಳಿಯುತ್ತದೋ'.

ಪ್ರತಿರಾತ್ರಿ ಕತ್ತಲೆ ಕೋಣೆಯಲ್ಲಿ ಸಾವಿತ್ರಿ ಬೇಗ ಸಾವು ಬರಲೆಂದು ಪ್ರಾರ್ಥಿಸುತ್ತಿದ್ದಳು. ಬೇರೆಯಾರಿಗೂ ತೊಂದರೆಯಾಗದಂತೆ ಸಾಯುವ ಮಾರ್ಗ ಇದ್ದೇ ಇರುತ್ತದೆಯಾಲ್ಲವೇ? ತಿರುಪತಿ ವೆಂಕಟರಮಣನಲ್ಲಿ 'ದೇವರೇ, ನಿನಗೆ ಏಳು ತೆಂಗಿನಕಾಯಿ ಕಾಣಿಕೆ ನೀಡುವೆ. ಈ ಆತಂಕದಿಂದ ನನ್ನನ್ನು, ನನ್ನ ಕುಟುಂಬದವರನ್ನು ಪಾರುಮಾಡು' ಎಂದು ಬೇಡುತ್ತಿದ್ದಳು.

(9ನೇ ಪುಟಕ್ಕೆ)

ಈಶಾನ್ಯ ಮೂಲೆಯಲ್ಲಿ

ನಮ್ಮ ದೇಶದ ಈಶಾನ್ಯ ಗಡಿಯ ಅರುಣಾಚಲ ಪ್ರದೇಶಕ್ಕೆ ನಮ್ಮ 'ಅಚಲ' ಸಂಪಾದಕ ಬಳಗದ ಶ್ರೀಮತಿ ಹೆಚ್.ಎಸ್. ಗೀತಾರವರು ಇತ್ತೀಚೆಗೆ ಭೇಟಿಕೊಟ್ಟಿದ್ದರು. ಅಲ್ಲಿನ ತಮ್ಮ ಅನುಭವದ ಒಂದು ಎಳೆಯನ್ನು ಅಚಲದ ಓದುಗರಿಗಾಗಿ ಇಲ್ಲಿ ಕಾಣಿಸಿದ್ದಾರೆ.

ಗಡಬಡಿಸಿ ಎದ್ದು ಕುಳಿತೆ. ಸುಶ್ರಾವ್ಯವಾದ ಹಾಡು ಕೇಳಿ ಬರುತ್ತಿತ್ತು. ನಾನೆಲ್ಲಿದ್ದೇನೆ ಎನ್ನುವುದು ಕೆಲನಿಮಿಷಗಳ ಕಾಲ ತಿಳಿಯಲೇ ಇಲ್ಲ. ಪಕ್ಕಕ್ಕೆ ತಿರುಗಿ ನೋಡಿದರೆ ಹಾಸಿಗೆ ಖಾಲಿ.ಮತ್ತೊಂದರಲ್ಲಿ ಯಾರೋ ಮಲಗಿದ್ದರು. ದಿಟ್ಟಿಸಿ ನೋಡಿದರೆ ಅದು ಯಾರೋ ಅಲ್ಲ-ಕಲಾವತಿ. ಅರೆ, ನಾವೆಲ್ಲ ಅರುಣಾಚಲಕ್ಕೆ ಬಂದಿದ್ದೇವಲ್ಲ ಎಂದು ನನಗೆ ನಾನೇ ಹೇಳಿಕೊಂಡೆ, ಹೌದು, ಅರುಣಾಚಲ ಪ್ರದೇಶಕ್ಕೆ ಬಂದಿದ್ದೆವು. ಕೇಳು ಬರುತ್ತಿದ್ದ ಹಾಡು ಸಹ ಅದಕ್ಕೆ ಪುರಾವೆ ಎಂಬಂತ್ತಿತ್ತು.

ಅರುಣಾಚಲ್ ಹಮಾರ ಹೈ.... ಅದು ತೊಯ್ಯೆಂನ ದನಿ. ಹಿಂದಿನ ರಾತ್ರಿ ತಾನೆ ನಾವು ಇಲ್ಲಿ ಬಂದಿಳಿದಾಗ, ವಿದ್ಯುತ್ ಇರಲಿಲ್ಲ. ಅಲ್ಲದೆ ನಾವು ತುಸು ವೇಳೆ ಮೀರಿ ಬಂದಿದ್ದರಿಂದ ಹಾಸ್ಟೆಲ್‌ನ ಹುಡುಗಿಯರೆಲ್ಲ ತಮ್ಮ ಕೆಲಸಕಾರ್ಯಗಳನ್ನು ಮುಗಿಸಿ ರೂಮು ಸೇರಿದ್ದರು. ತಮ್ಮ ಹಾಡಿನ ಖಜಾನೆಯನ್ನು ಬಿಚ್ಚಿದ್ದರು. 'ಯಾರೋ ಎಷ್ಟು ಮನ ತುಂಬಿ ಹಾಡುತ್ತಾರಲ್ಲ' ಎಂದು ಕಲಾ ಹೇಳಿದಾಗ, 'ಅದು ತೊಯ್ಯೆಂನ ಧ್ವನಿ' ಎಂದು ದೀದೀ ಹೇಳಿದ್ದರು. ಹಾಡನ್ನು ಆಲಿಸುತ್ತಲೇ ಕುಳಿತೆ. ಅರುಣಾಚಲ ಪ್ರದೇಶಕ್ಕೆ ಬಂದ ಹಾದಿಯನ್ನೂ ಮೆಲುಕು ಹಾಕಿಕೊಂಡೆ.

ಅರುಣಾಚಲ ಪ್ರದೇಶಕ್ಕೆ ಹೋಗಿ ಬರಬೇಕೆನ್ನುವುದು ನನ್ನ ಕೆಲವರ್ಷಗಳ ಕನಸೇನೋ ಆಗಿತ್ತು. ಆದರೆ, ಹೋಗದೆ ಇರಲೂ ಕಾರಣಗಳು ಇದ್ದವು (ಇದ್ದೇ ಇರುತ್ತವಲ್ಲ!) ಕಳೆದ ವರ್ಷ, ಅಂದರೆ 2000ರಲ್ಲಿ 'ಈ ವರ್ಷ ಅರುಣಾಚಲಕ್ಕೆ ಹೋಗಿಯೇ ತೀರಬೇಕೆಂದು' ದೇಶಪಾಂಡೆಯವರು ಬಹಳ ಕಟ್ಟುನಿಟ್ಟಾಗಿ ಹೇಳಿದರು.

ಅಕ್ಟೋಬರ್‌ಗೆ ಡೆಡ್‌ಲೈನ್ ಸಹ ಫಿಕ್ಸ್ ಮಾಡಿದರು. ಸರಿ, ರಜೆಗಾಗಿ ಆಗಸ್ಟ್‌ನಲ್ಲೇ ಅರ್ಜಿ ಗುಜರಾಯಿಸಬೇಕು, ಎಂದು ಲೆಕ್ಕಾಚಾರ ಹಾಕಿದರೆ, ಆಗಿದ್ದೇ ಬೇರೆ. ದೊಡ್ಡವರ ಸಣ್ಣತನಗಳಿಂದಾಗಿ, ಮೇಲಿನವರ ಕುತಂತ್ರಗಳಿಂದಾಗಿ ನಾನೇ ರಾಜೀನಾಮೆ ಕೊಡಬೇಕಾದ ಪರಿಸ್ಥಿತಿ ಬಂದಿತು. ಹೀಗೆ ಅರುಣಾಚಲ ಪ್ರದೇಶದ ದಾರಿ ನಿಚ್ಚಳಲವಾಯಿತು, ನಿರಾತಂಕವಾಯಿತು. ಅರುಣಾಚಲ ಪ್ರದೇಶಕ್ಕೇ ವಿವೇಕಾನಂದ ಕೇಂದ್ರದ ಸಹಾಯದಿಂದ ಹೋದೆವು. ಕೇಂದ್ರದ ಕಾರ್ಯಕರ್ತರಾದ ದೇಶಪಾಂಡೆಯವರೇ ನಮ್ಮ ಮಾರ್ಗದರ್ಶಿ.

ಅರುಣಾಚಲ ಪ್ರದೇಶ ಸಪ್ತ ಸೋದರಿ ರಾಜ್ಯಗಳಲ್ಲೊಂದು. ಭೂಪಟ ತೆಗೆದು ನೋಡಿದರೆ ಭಾರತದ ಈಶಾನ್ಯ ಮೂಲೆಯಲ್ಲಿದೆ. ಇದರ ಅಂತಾರಾಷ್ಟ್ರೀಯ ಗಡಿರೇಖೆ ಬಹಳ ಉದ್ದ. ಒಂದು ಬದಿಗೆ, ಅಂದರೆ ಪಶ್ಚಿಮಕ್ಕೆ ಟಿಬೆಟ್, ಭೂತಾನ್‌ಗಳಿದ್ದರೆ, ಉತ್ತರ ಹಾಗೂ ಈಶಾನ್ಯ ದಿಕ್ಕುಗಳಲ್ಲಿ ಚೀನಾ ಇದೆ, ಪೂರ್ವಕ್ಕೆ ಮಯನ್‌ಮಾರ್ (ಬರ್ಮಾ). ಹೊರಡುವ ಮುಂಚೆ ಅರುಣಾಚಲ ಪ್ರದೇಶಕ್ಕೆ ಹೋಗುತ್ತಿದ್ದೇನೆ. ಎಂದು ಯಾರಿಗೇ ಹೇಳಿದರೂ 'ಅಷ್ಟು ದೂರ ಹೋಗುತ್ತೀರಾ' ಎಂದು ಎಲ್ಲರೂ ಅನ್ನುವವರೇ. ವಿದೇಶಗಳಿಗೆ ಜನ ದಾಪುಗಾಲು ಹಾಕಿಕೊಂಡು ಹೋಗುವಾಗ, ನಮ್ಮದೇ ಈಶಾನ್ಯದ ಮೂಲೆಗೆ ಹೋದರೆ ಇಂತಹ ಪ್ರತಿಕ್ರಿಯೆಯೇ ಎಂದು ನನಗೆ ಕಿರಿಕಿರಿಯೂ ಆಗುತ್ತಿತ್ತು. ಪ್ರಾಯಶಃ ಅಲ್ಲಿ ಉಗ್ರಗಾಮಿಗಳ ಹಾವಳಿ ಕತೆ ಕೇಳಿ ಕೇಳಿ ಅವರು ಹಾಗೆ ಹೇಳುತ್ತಿದ್ದರೇನೋ!


ಅಂತೂ ಅರುಣಾಚಲ ಪ್ರದೇಶಕ್ಕೆ ನಾವು ಆರು ಜನ ಪ್ರಯಾಣ ಬೆಳೆಸಿದೆವು. ರೈಲು ಪ್ರಯಾಣದ ಬಗ್ಗೆ ಹೇಳುವುದೇನಿರುತ್ತದೆ? ವಿದ್ಯುತ್ ಹಾಗೂ ನೀರು ಅಸಮರ್ಪಕ. ಪ್ಯಾಂಟ್ರಿ ಕಾರ್ ಇದ್ದರೂ, ಅಲ್ಲಿ ಒಲೆಯನ್ನೇ ಹೂಡುವುದಿಲ್ಲ. ಅವ್ಯವಸ್ಥೆಯೇ ವ್ಯವಸ್ಥೆಯ ಅಂಗವಾದಾಗ, ಹೇಳುವುದು ತಾನೆ ಏನು? ಆದರೆ ನಾವು ಆರು ಜನ ಬೆಂಗಳೂರಿನಲ್ಲಿಯೇ ಒಬ್ಬರನ್ನೊಬ್ಬರು ಸಂಧಿಸುವುದು ಸ್ವಲ್ಪ ಅಪರೂಪವಾದ್ದರಿಂದ, ರೈಲಿನಲ್ಲಿ ಮಾತನಾಡಲು ಸಾಮಗ್ರಿ ಬಹಳವಿತ್ತು. ಹೀಗಾಗಿ ಇತರ ಅರೆಕೊರೆಗಳನ್ನು ಆನಂದಿಸುತ್ತಲೇ ಪ್ರಯಾಣ ಮಾಡಿದೆವು. ಕಲ್ಕತ್ತಾ, ಗೌಹಾತಿ, ದಿಬ್ರೂಘರ್ ಹಾಗು ತೀನ್‌ಸೂಬಿಯಾಗಳಲ್ಲಿ ಒಂದೊಂದು ರಾತ್ರಿ ತಂಗಿದ್ದೆವು. ತೀನ್‌ಸೂಬಿಯಾ ಸಹ ಅಸ್ಸಾಮಿಗೇ ಸೇರಿದ್ದು. ಇಲ್ಲಿಂದ ಅರುಣಾಚಲ ಪ್ರದೇಶದ ಸೆಜೋಸಾಗೆ ಒಂದು ಹಗಲಿನ ಪ್ರಯಾಣ. ಬೆಳಗ್ಗೆ ಬಸ್ಸಿನಲ್ಲಿ 8 ಗಂಟೆಗೆ ಹೊರಟಿದ್ದು, ಸೆಜೋಸಾವನ್ನು ತಲುಪಿದಾಗ ಕತ್ತಲಾಗಿತ್ತು. ಅರುಣಾಚಲದಲ್ಲಿ ಸೂರ್ಯ ಬಹಳ ಬೇಗನೆ ಮೂಡುತ್ತಾನೆ ಸೂರ್ಯಾಸ್ತವೂ ಬೇಗನೆಯೇ ಆಗುತ್ತದೆ. ದಟ್ಟವಾದ ಕಾಡು ಟೀತೋಟಗಳು ನಮಗೆ ಹಗಲು ಸರಿದದ್ದೇ ತಿಳಿಯಲಿಲ್ಲ. 'ಸೆಜೋಸಾ ಆಗಯಾ, ಉತ್‌ರೋ ಉತ್‌ರೋ' ಅಂದಾಗಲೇ ಉದುರಿಕೊಳ್ಳ ಬೇಕೆಂಬ ಅರಿವಾದದ್ದು.

ಸೆಜೋಸಾದಲ್ಲಿ ಇಳಿದಾಗ, ನಮ್ಮನ್ನು ಕರೆದೊಯ್ಯ ಬೇಕಾಗಿದ್ದ ವ್ಯಾನ್ ಬಂದಿರಲಿಲ್ಲ. ಕೇಂದ್ರಕ್ಕೆ ಒಂದು ಫೋನ್ ಮಾಡುವ ಹವಣಿಕೆಯಲ್ಲಿ ಒಬ್ಬರ ಮನೆ ಹೊಕ್ಕೆವು. ಅಲ್ಲಿ ಸಿಕ್ಕಿದ್ದು ಟಿಪಿಕಲ್ ಗುಡ್ಡಗಾಡಿನವರ ಆತ್ಮೀಯತೆ, ಆತಿಥ್ಯ. ವ್ಯಾನ್ ಬರುವವರೆಗೂ ನಮ್ಮೊಡನೆ ಸಂಭಾಷಿಸುತ್ತಿದ್ದ ಮನೆಯಾತ ಕೆಲ ಅಂಶಗಳನ್ನು ಮುಚ್ಚು ಮರೆಯಿಲ್ಲದೆ ವ್ಯಕ್ತ ಪಡಿಸಿದರು. ಉದಾಹರಣೆಗೆ:- ಅರುಣಾಚಲ ಪ್ರದೇಶದಲ್ಲಿ ಬಲವಂತವಾಗಿ ನಡೆಯುತ್ತಿರುವ ಮತಾಂತರಗಳ, ಮೂಲೆಗುಂಪಾಗಿ ಬಿಟ್ಟಿರುವ ಅರುಣಾಚಲಿಗಳು, ವೀರಪ್ಪನ್‌ನನ್ನು ಹಿಡಿಯಲಾಗದ ಕರ್ನಾಟಕ ನಿಷ್ಕ್ರಿಯತೆ, ಇತ್ಯಾದಿ. ನಮ್ಮನ್ನು ಕರೆದೊಯ್ಯಲು ವ್ಯಾನ್ ಬಂದಿದ್ದರಿಂದ, ಸಂಭಾಷಣೆ ತುಂಡಾಯಿತು.

ಕತ್ತಲಲ್ಲಿ ನಮ್ಮನ್ನು ಹೊತ್ತು ಸಾಗಿದ ವ್ಯಾನ್ ಹತ್ತೇ ನಿಮಿಷಗಳಲ್ಲಿ ಒಂದು ಕಟ್ಟಡದ ಮುಂದೆ ನಮ್ಮನ್ನು ಇಳಿಸಿತು. ಬನ್ನಿ ಬನ್ನಿ ಎಂದೊಬ್ಬರು ದೀದಿ. ಸ್ವಾಗತಿಸಿದರು. ಅವರ ಹೆಸರು ಜೊಯಶ್ರಿ ದೀದೀ ನಾವು ನಮ್ಮನ್ನು ಪರಿಚಯಿಸಿಕೊಂಡೆವು. ಮತ್ತೊಮ್ಮೆ ಚಾ. ಕಾಫಿ ಆಯಿತು. ಅವರು ಅಡಿಗೆ ತಯಾರಿ ನಡೆಸಿದಾಗ ನಾವೂ ಸೇರಿಕೊಂಡೆವು.

ನಗರಗಳಲ್ಲಿಯೇ ವಿದ್ಯುತ್ ಪೂರೈಕೆ ಅಸಮರ್ಪಕ ವಾಗಿರುವಾಗ ಗುಡ್ಡಗಾಡಿನ ಪರಿಸ್ಥಿತಿಯನ್ನು ವಿಶದೀಕರಿಸುವ ಆವಶ್ಯಕತೆಯೇ ಇಲ್ಲ. ದಟ್ಟವಾದೊಂದು ಕಾಡಿನಲ್ಲಿ ಬುಡ್ಡಿ ದೀಪದ ಬೆಳಕಿನಲ್ಲಿ ದೀದೀ ಅಡಿಗೆ ಕೆಲಸ ಮುಗಿಸಿದರು. ಸಾರಿಗೆ ಉಪ್ಪು ಹಾಕುತ್ತ ಅವರು ಹೇಳಿದ ಸಂಗತಿ ಕೇಳಿ ಮೈ ಜುಮ್ಮೆಂದಿತು. ಆನೆಗಳಿಗೆ ಉಪ್ಪು ಬಹಳ ಇಷ್ಟವಂತೆ. ಒಂದು ರಾತ್ರಿ ದೀದೀ ಹಾಗೂ ಅಲ್ಲಿನ ಹುಡುಗಿಯರಿಗೆ ದಿಢೀರನೆ ಎಚ್ಚರವಾಯಿತಂತೆ. ನೋಡಿದರೆ ಆನೆಗಳ ಹಿಂಡು ಅಡುಗೆ ಮನೆಯ ಕಿಟಕಿಯ ಬಳಿ ದಾಂಧಲೆ ನಡೆಸುತ್ತಿದ್ದವಂತೆ. ಒಳಗಿನಿಂದ ಇವರುಗಳೂ ದೀಪ ಹಚ್ಚಿ ಗಲಾಟೆ ಮಾಡಿದ್ದಕ್ಕೆ ಅವು ಓಡಿದವಂತೆ. ಮರೆತು ಉಪ್ಪನ್ನು ಮೇಲೆಯೆ ಇಟ್ಟಿದ್ದು ಆಮೇಲೆ ದೀದೀಗೆ ಅರಿವಾಯಿತಂತೆ ಅಂದಿನಿಂದ ಏನೇ ಮರೆತರೂ ಉಪ್ಪನ್ನು ಒಳಗೆಲ್ಲೋ ಬಚ್ಚಿಡುವುದು ಮರೆಯುವುದಿಲ್ಲ. ಮುಕ್ಕಾಗಿರುವ ಕಿಟಕಿ ಮರೆಯಲೂ ಬಿಡುವುದಿಲ್ಲ.

ನಾವು ಆ ರಾತ್ರಿ ಹೋಗಿದ್ದು ವಿವೇಕಾನಂದ ಕೇಂದ್ರ ಹೆಣ್ಣು ಮಕ್ಕಳಿಗಾಗಿ ನಡಸುತ್ತಿರುವ ವೃತ್ತಿ ತರಬೇತಿ ಕೇಂದ್ರಕ್ಕೆ. ಮರುದಿನ ಬೆಳಿಗ್ಗೆ 10 ಗಂಟೆಗೆ ದೀದೀ ನಮಗೆ ಆ ಎಲ್ಲ ಹುಡುಗಿಯರ ಪರಿಚಯ ಮಾಡಿಕೊಟ್ಟರು. ಕೆಲವರು ಎಸ್.ಎಸ್.ಎಲ್.ಸಿ ಯವರೆಗೆ ಓದಿದ್ದಾರೆ, ಕೆಲವರು ಶಾಲೆಗೇ ಹೋಗಿಲ್ಲ. ಉದಾಹರಣೆಗೆ, ಅತುಲಾ ಓದು ಬರಹ ಕಲಿತಿಲ್ಲ. ಕಲಿತಿಲ್ಲವೆಂಬ ವ್ಯಥೆ ಇದ್ದರೂ ಆತ್ಮವಿಶ್ವಾಸಕ್ಕೇನೂ ಅವಳಲ್ಲಿ ಕೊರತೆಯಿಲ್ಲ. ಬಹಳ ಸೃಜನಶೀಲೆ, ಕಾರ್ಪೆಟ್‌ಗಳನ್ನು ಚಕಚಕನೆ ಹೆಣೆಯುತ್ತಾಳೆ, ಮಧುರವಾಗಿ ಹಾಡುತ್ತಾಳೆ, ಕನ್ಯಾಕುಮಾರಿಯ ಶಿಬಿರದಲ್ಲಿಯೂ ಭಾಗವಹಿಸಿದ್ದಾಳೆ. ನಗರ ವಾಸಿಗಳನ್ನೂ ನಾಚಿಸುವಂತಹ ಸಂವಹನಾ ಚಾತುರ್ಯ ಅವಳದು. ವ್ಯಕ್ತಿಗಳನ್ನು ಸಂದರ್ಭ ಸನ್ನಿವೇಶಗಳನ್ನು ಬಹಳ ಚೆನ್ನಾಗಿ ವಿಶ್ಲೇಷಿಸುತ್ತಾಳೆ. ಮಾಯ ಎಸ್.ಎಸ್.ಎಲ್.ಸಿ ಮಾಡಿದ್ದಾಳೆ. ಸೊಗಸಾಗಿ ಇಂಗ್ಲೀಸ್ ಮಾತನಾಡುತ್ತಾಳೆ.



ಮಾಳವಿಕಾ, ತೊಯ್ಯೆಂ - ಇವರೆಲ್ಲ ಇಲ್ಲೇ ತರಬೇತಿ ಪಡೆದವರು. ಈಗ ಇಲ್ಲೇ ಶಿಕ್ಷಕಿಯರಾಗಿ ಮುಂದುವರಿದಿದ್ದಾರೆ. ಅಸ್ಸಾಂನ ಮಾಳವಿಕಾ ಮನೆಗೂ ಮರಳಿ ಹೋಗಿದ್ದಳು. ಆದರೂ ಕೇಂದ್ರದ ಪರಿಸರವನ್ನು ಬಿಟ್ಟಿರಲಾದರೆ ವಾಪಸ್ಸು ಬಂದಿದ್ದಾಳೆ. ಬೆಂಗಳೂರಿನ ಬಗ್ಗೆ ಹೇಳಿ, ದೀದೀ ಎಂದು ಎಲ್ಲ ಹುಡುಗಿಯರು ನಮ್ಮನ್ನು ಸುತ್ತುವರಿದರು. ಹೀಗೆಯೇ ಪರಸ್ಪರ ಮಾತುಕತೆ ಸಾಗಿತು.

ಅರುಣಾಚಲಿಗಳಲ್ಲಿ ಸುಮಾರು 26 ಬುಡಕಟ್ಟುಗಳಿವೆ. ಇಲ್ಲೊಂದು 'ಛೋಟಾ ಭಾರತ'ವಿದೆ ಎಂದೇ ಅವರು ಹೇಳುತ್ತಾರೆ. ಆದಿ, ಮೋನ್‌ಪಾ, ನಿಶಿ, ಸೋಳುಂಗ್, ಮಿಶ್ಮಿ - ಹೀಗೆ ಇವರ ಪಟ್ಟಿ ಬೆಳೆಯುತ್ತದೆ. ನಾಗರಿಕ ಜಗತ್ತಿನಲ್ಲೇ ಜೀತ ಪದ್ಧತಿ ಜೀವಂತವಾಗಿರುವ ಪ್ರಕರಣಗಳು ಬೆಳಕಿಗೆ ಬರುತ್ತಿರುವಾಗ ಇಲ್ಲಿಯೂ ಅದು ಉಂಟು ಎಂದರೆ ಆಶ್ಚರ್ಯವೇನಿಲ್ಲ ಅಲ್ಲವೇ? ಸೋಳುಂಗ್ ಒಂದು ಊಳಿಗ ಜನಾಂಗ. ಮಿಶ್ಮಿ ಎಂಬುದು ಭೀಷ್ಮಕ ರಾಜನ ವಂಶವಂತೆ. ನೆನಪಿದೆ ತಾನೆ - ಭೀಷ್ಮಕ ಕೃಷ್ಣನ ಹೆಂಡತಿ ರುಕ್ಮಿಣಿಯ ತಂದೆ.

''ಇವರನ್ನೆಲ್ಲ ಶಾಲೆಗಳಿಗೆ ಸೇರಿಸುವುದು ಬಹಳ ಪ್ರಯಾಸದ ಕೆಲಸವಾಗಿತ್ತು. ಗಿರಿಜನರಿಗೆ ಅಷ್ಟು ಸಲೀಸಾಗಿ ನಮ್ಮ ಮೇಲೆ ವಿಶ್ವಾಸ ಬಂದೀತೆ? ಮನೆಮನೆಗೂ ಹೋಗಿ, ಅವರ ಮನ ಒಲಿಸಿದೆವು, ಈ ಮಕ್ಕಳೋ - ಬಹಳ ಒಡ್ಡು. ಹಾರಾಡುತ್ತಿದ್ದ ಚಿಟ್ಟೆಗಳನ್ನು ಪಚಕ್ಕನೆ ಹಿಡಿದು ಇಡಿಯಾಗಿ ನುಂಗಿ ಬಿಡುತ್ತಿದ್ದರು. ಈಗ ಆ ಅಭ್ಯಾಸವೆಲ್ಲ ನಿಂತಿದೆ'' ಎಂದು ದೀದೀ ನಗುತ್ತ ತಮ್ಮ ಆರಂಭದ ದಿನಗಳನ್ನು ನೆನಪು ಮಾಡಿಕೊಂಡರು.

ಇಲ್ಲಿಯೂ ಸಾಮಾನ್ಯವಾಗಿ ಪುರುಷರು ಉಂಡಾಡಿ ಗಳಾಗಿಯೇ ಕಾಲ ಕಳೆಯುತ್ತಾರೆ. ಅವರು ಇಷ್ಟಪಟ್ಟು ಮಾಡುವ

ಒಂದೇ ಒಂದು ಕೆಲಸವೆಂದರೆ ಕಾಡೊಳಗೆ ನುಗ್ಗಿ ಬೇಟೆಯಾಡುವುದು. ಚಿಕ್ಕ ಹುಡುಗನಿಂದ ಹಿಡಿದು ದೊಡ್ಡವರ ವರೆಗೂ ಎಲ್ಲರ ಕೈಯಲ್ಲೂ ಯಾವಾಗಲೂ ಕವಣೆ ಕಲ್ಲು, ಹಕ್ಕಿಗಳಿಗೆ ಇಲ್ಲಿ ಉಳಿಗಾಲವೇ ಇಲ್ಲ. ಮಹಿಳೆಯರೇ ಎಲ್ಲ ಕೆಲಸಗಳನ್ನು ಮಾಡುತ್ತಾರೆ. ಮದುವೆಯಲ್ಲಿ ವಧುದಕ್ಷಿಣ ಪದ್ಧತಿ ಇದೆ. ಯಾರು ಹೆಚ್ಚು ವಧುದಕ್ಷಿಣೆ ಕೊಡುತ್ತಾರೋ ಅವರೊಂದಿಗೆ ಮದುವೆ ನಿಶ್ಚಯವಾಗುತ್ತದೆ. ವಧುದಕ್ಷಿಣೆ ಏನಿರಬಹುದು ಗೊತ್ತೆ? ಮಿಥುನ್ ಎಂದು ಕರೆಯಲ್ಪಡುವ ಒಂದು ಜಾತಿಯ ಕಾಡೆಮ್ಮೆ. ಅವರಿಗೆ ಮಿಥುನ್ ಒಂದು ಅಮೂಲ್ಯ ಆಸ್ತಿ. 'ಪ್ರೆಸ್ಟೀಜ್' ಸಂಕೇತ. ಅದೇ ರೀತಿ ಹಾರ್ನ್ ಬಿಲ್ ಪಕ್ಷಿಯ ಉದ್ದನೆಯ ಕೊಕ್ಕನ್ನು ಟೋಪಿಗೆ ಸಿಕ್ಕಿಸಿ ಕೊಳ್ಳುವುದೂ ಪ್ರೆಸ್ಟೀಜ್ ವಿಷಯವೇ. ಎಲ್ಲ ಕುಟುಂಬದವರೂ ತಾವು ಕಡಿಯುವ ಮಿಥುನ್‌ನ ತಲೆಗಳನ್ನು ಹಜಾರದ ಗೋಡೆಯ ಮೇಲೆ ನೇತು ಹಾಕಿರುತ್ತಾರೆ. ಎಷ್ಟು ತಲೆಗಳಿರುತ್ತವೋ, ಅಷ್ಟು ಎತ್ತರ ಆ ಕುಟುಂಬದ ಪ್ರತಿಷ್ಠೆ.

ಅರುಣಾಚಲಿಗಳಲ್ಲಿ ಬಹುಪತ್ನಿತ್ವ ಜಾರಿಯಲ್ಲಿದೆ. ಆದರೂ ಈಚೆಗೆ ಅಂದರೆ ಜನ ವಿದ್ಯಾವಂತರಾಗುತ್ತಿದ್ದಂತೆ, ತಮ್ಮ ರಾಜ್ಯ ಬಿಟ್ಟು ಆಚೀಚೆಯ ಪ್ರಪಂಚವನ್ನು ನೋಡುತ್ತಿದ್ದಂತೆ, ಈ ಪದ್ಧತಿ ಕಡಿಮೆಯಾಗತೊಡಗಿದೆ. ವಾಸ್ತವದಲ್ಲಿ, ಅರುಣಾಚಲ ಪ್ರದೇಶದಲ್ಲಿ ಅಕ್ಷರ ಕ್ರಾಂತಿ ಹರಡುವುದರಲ್ಲಿ ವಿವೇಕಾನಂದ ಕೇಂದ್ರ ಪ್ರಮುಖ ಪಾತ್ರವಹಿಸಿದೆ. ಇಲ್ಲಿನ ಜನರಿಗೆ ಕೇಂದ್ರ ಹಾಗೂ ಕೇಂದ್ರದ ಕಾರ್ಯಕರ್ತರೆಂದರೆ ಬಹಳ ಗೌರವ, ಅಪಾರ ಅಭಿಮಾನ. ಕೇಂದ್ರ ಇಲ್ಲಿ ಈಗ 17 ಶಾಲೆಗಳನ್ನು ನಡೆಸುತ್ತಿದೆ. ನಾವು ಸಂದರ್ಶಿಸಿದ ವೃತ್ತಿ ತರಬೇತಿ ಕೇಂದ್ರದಲ್ಲಿ 16 ಮಂದಿ ಹುಡುಗಿಯರಿದ್ದಾರೆ. ಕಾರ್ಪೆಟ್ ತಯಾರಿಕೆ, ಬಿದಿರು, ಹೆಣಿಗೆ, ಉಲ್ಲನ್ ಹೆಣಿಗೆ ಇತ್ಯಾದಿಗಳನ್ನು ಇಲ್ಲಿ ತಯಾರಿಸುತ್ತಾರೆ. ಈ ಉತ್ಪನ್ನಗಳಿಗೆ ಭಾರೀ ಬೇಡಿಕೆಯಿದೆ. ಜೊತೆಗೆ ಹಿತ್ತಲಲ್ಲಿರುವ ಜಮೀನಿನಲ್ಲಿ ತರಕಾರಿಗಳನ್ನು ಬೆಳೆಯುತ್ತಾರೆ.

ಹೊರಗೆ ವ್ಯಾನ್ ಬಂದು ನಿಂತ ಸದ್ದಾಯಿತು. ಬೇಗ ಬೇಗನೆ ಒಟ್ಟಿಗೆ ಕುಳಿತು ಊಟ ಮಾಡಿದೆವು. ನಮ್ಮ ಬೇಡಿಕೆಯ ಮೇರೆಗೆ ಹುಡುಗಿಯರೆಲ್ಲ ಒಂದೆರಡು ಹಾಡು ಹೇಳಿದರು. ಮರಗಳಲ್ಲಿ ಕುಳಿತು ಕುಹೂ ಕುಹೂ ಎಂದರೆ ಕವಣೆ ಕಲ್ಲಿನೇಟು ಬಿದ್ದೀತು ಎಂಬ ಭಯದಿಂದಲೋ ಏನೋ ಕೋಗಿಲೆಗಳೆಲ್ಲ ಇವರ ಕಂಠಗಳಲ್ಲೇ ಮನೆ ಮಾಡಿಕೊಂಡಿರಬೇಕು.

ಎಲ್ಲರಿಗೂ ವಿದಾಯ ಹೇಳಿ ವ್ಯಾನ್ ಹತ್ತಿದಾಗ, ಮಾಳವಿಕಾ ಕಿಟಕಿಯ ಬಳಿ ಬಂದು ಕೇಳಿದಳು - 'ನನ್ನ ಬಗ್ಗೆಯೂ ಬರೆಯುವಿರಲ್ಲವೆ, ದೀದೀ?'

ಅಂದ ಹಾಗೆ, ಇಲ್ಲಿನ ಹೊಣೆ ನಿರ್ವಹಿಸುತ್ತಿರುವ ದೀದೀ ಮೊದಲೇ ಹೇಳಿದಂತೆ ಜೊಯಶ್ರೀ ದೀದೀಯಲ್ಲ; ಅವರು ಜಯಶ್ರೀ ದೀದೀ ಅಚ್ಚ ಕನ್ನಡತಿ.

ಸಾವಿತ್ರಿ...........

ಒಂದು ದಿನ ಸಾವಿತ್ರಿಗೆ ಅವಳ ಗಂಡನ ಎರಡನೆಯ ಮದುವೆಯ ಸುದ್ದಿ ಬಂದಿತು. ವಿವಾಹ ವಿಚ್ಛೇದನವಾಗಿರಲಿಲ್ಲ. ಆದರೆ ಅದನ್ನು ಯಾರು ಲಕ್ಷಿಸುತ್ತಾರೆ? ಇಂಥ ಸಣ್ಣ ವಿಷಯಗಳಿಗೆ ಕುಟುಂಬವು ಕೋರ್ಟಿಗೆ ಹೋಗುತ್ತದೆಂಬ ಮಾತು ಹೊರಗಡೆ ಕೇಳಿಬಂದರೆ ಉಳಿದ ಮಕ್ಕಳಿಗೆ ಅವರು ಮದುವೆ ಮಾಡುವುದೆ?

ಲಕ್ಷ್ಮೀ ಮೊದಲು ಸಾವಿತ್ರಿ ಮನೆಯಲ್ಲಿ ಕೆಲಸ ಮಾಡುತ್ತಿದ್ದವಳು. ಒಮ್ಮೆ ಅವಳ ಭೇಟಿಯಾಯಿತು ಹೇಗಿದ್ದೀಯಾ ಲಕ್ಷ್ಮೀ? ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದೀರಾ?'' ಎಂದು ಸಾವಿತ್ರಿ ಕೇಳಿದಳು. ಲಕ್ಷ್ಮೀ ಹೆಮ್ಮೆಯಿಂದ ಬೀಗಿದಳು. 'ಅಮ್ಮಾ, ಎಲ್ಲಾ ಚೆನ್ನಾಗಿದ್ದೇವೆ' ಎಂದಳು. ಲಕ್ಷ್ಮಿ ಮೊದಲು ಮನೆಗುಡಿಸಿ, ಸರಿಸಿ, ಪಾತ್ರೆ ತೊಳೆಯುವ ಕೆಲಸ ಮಾಡುತ್ತಿದ್ದಳು: ಅವಳು ಕೆಳವರ್ಗ ಮತ್ತು ಜಾತಿಯಿಂದ ಬಂದವಳಾದುದರಿಂದ ಅವಳಿಗೆ ಅಡುಗೆಮನೆ ಮತ್ತು ಪೂಜಾ ಕೊಠಡಿಯೊಳಗೆ ಹೋಗಲು ಅನುಮತಿ ಇರಲಿಲ್ಲ. 'ನೀನು ತುಂಬ ಖುಷಿಯಾಗಿರುವಂತಿದೆ' ಎಂದು ಸಾವಿತ್ರಿ ಕೇಳಿದಾಗ,' ಹೌದು ಅಮ್ಮಾ, ತಿರುಪತಿ ತಿಮ್ಮಪ್ಪನ ದಯೆಯಿಂದ ಕಳೆದ ವರ್ಷ ನಾನು ನನ್ನ ಗ್ರಾಮದ ಪಂಚಾಯತ್ ಅಧ್ಯಕ್ಷಳಾಗಿ ಆಯ್ಕೆಯಾದೆ. ಈಗ ಎಲ್ಲರೂ ನನ್ನನ್ನು ಗೌರವಿಸುತ್ತಾರೆ. ನನ್ನ ಗಂಡ ಕೂಡ ಈಗ ನನ್ನನ್ನು ಹೆಚ್ಚು ಹೊಡೆಯುವುದಿಲ್ಲ' ಎಂದು ಲಕ್ಷೀ ಅಭಿಮಾನದಿಂದ ಹೇಳಿಕೊಂಡಳು.

ಲಕ್ಷ್ಮೀಯ ಪುಣ್ಯ ಕಂಡು ಸಾವಿತ್ರಿ ಅವಳೇ ಧನ್ಯೆ ಎಂದುಕೊಂಡಳು. ತನಗಂಥ ಅದೃಷ್ಟ ಬದುಕಿನಲ್ಲಿ ಒದಗುವುದೇ ಎಂದು ಕನಸು ಕಾಣಲಾರಂಭಿಸಿದಳು. ಅವಳ ಕನಸು ನನಸಾಗಬಾರದೇಕೆ?

- ದೇವಿ

'ಫೆಮಿನಾ'ದಲ್ಲಿ ಅನನ್ಯ ಚಟರ್ಜಿ ಲೇಖನ ಆಧಾರಿತ

★ ★ ★ ★

ಅರುಣಾಚಲ ಪ್ರದೇಶ ಈಶಾನ್ಯದ ನಿಧಿಯಿದ್ದಂತೆ. ಇಲ್ಲಿನ ವೃಕ್ಷ ಸಂಪತ್ತು, ವನ್ಯಜೀವಿ ಸಂಪತ್ತು ಅಮೂಲ್ಯವಾದುದು. 'ಅಮೂಲ್ಯ'ವೆಂದ ಮೇಲೆ ಜನ ಬಿಟ್ಟಾರೆಯೇ? ಮರಗಳನ್ನು ಕಡಿದರು, ಸಾಮಿಲ್ಲುಗಳು ಹುಟ್ಟಿಕೊಂಡವು. ಈಗೇನೋ ಅಲ್ಲಿ ಮರ ಕಡಿಯುವುದನ್ನು ನಿಷೇಧಿಸಲಾಗಿದೆ.

ಪಾಕಿಸ್ತಾನದಲ್ಲಿ ಮಹಿಳಾ ಚಳವಳಿ

ಪಾಕಿಸ್ತಾನದಲ್ಲಿ ಸಮಾಜವಾದಿ ಚಳುವಳಿಯ ಪ್ರಮುಖ ಪ್ರವರ್ತಕರಲ್ಲಿ ಒಬ್ಬರಾದ ನಿಘಾಟ್ ಸೈಯದ್ ಖಾನ್. ಅವರು ಮಹಿಳಾ ಚಳುವಳಿಯ ಪ್ರವರ್ತಕರೂ ಆಗಿದ್ದು, ಅವರು 1987ರಲ್ಲಿ ಮಹಿಳಾ ಚಳುವಳಿಯ ರಂಗ ಒಂದನ್ನು ಸ್ಥಾಪಿಸಿದರು. (ವಿಮೆನ್ಸ್ ಆ್ಯಕ್ಷನ್ ಫೋರಂ). ಅದು ಅನೇಕ ಮಹಿಳಾ ಸಂಘಟನೆಗಳನ್ನು ಒಂದೇ ವೇದಿಕೆಯ ಮೇಲೆ ತರುವ ರಂಗವಾಗಿದೆ. ಅದು ಅಂದು ಪ್ರಧಾನಿಯಾಗಿದ್ದ ಜಿಯಾ ಉಲ್ ಹಕ್ ಅವರ ಭಯೋತ್ಪಾದಕ ಸರ್ಕಾರವನ್ನು ವಿರೋಧಿಸಲೆಂದೇ ಅಸ್ತಿತ್ವಕ್ಕೆ ಬಂದ ರಂಗವಾಗಿತ್ತು. 1983ರಲ್ಲಿ ಪಾಕಿಸ್ತಾನದಲ್ಲಿ ಜಾರಿಗೆ ಬಂದ ಮಾರ್ಷಲ್ ಲಾ ವಿರುದ್ಧ ಸಹ ಇದೇ ರಂಗ ಚಳುವಳಿ ಸಂಘಟಿಸಿ ಅದರ ನಾಯಕತ್ವ ವಹಿಸಿತ್ತು. ಅಯ್ಯೂಬ್ ಖಾನ್ ಸರ್ಕಾರ ಜಾರಿಗೆ ತಂದ ಮಾರ್ಷಲ್ ಲಾ ವಿರುದ್ಧ ಚಳವಳಿ ಸಂಘಟಿಸಿದ ಆಪಾದನೆಯ ಮೇಲೆ ಶ್ರೀಮತಿ ನಿಘಾಟ್ ಅವರನ್ನು ಅವರು ವ್ಯಾಸಂಗ ಮಾಡುತ್ತಿದ್ದ ಕಾಲೇಜಿನಿಂದ ಉಚ್ಚಾಟಿಸಲಾಯಿತು. ನಿಘಾಟ್ ಅವರ ತಂದೆ ಸಹ ಅಯ್ಯೂಬ್ ಖಾನರ ಆಡಳಿತದ ಒಂದು ಭಾಗವೇ ಆಗಿದ್ದರೆಂಬುದನ್ನು ಗಮನಿಸಬೇಕು. 60ರ ದಶಕದಲ್ಲಿ ನಿಘಾಟ್ ಅವರು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಅಭ್ಯಾಸಿಸುತ್ತಿದ್ದಾಗಲೇ ಅಂದು ವಿಯತ್‌ನಾಮ್ ಯುದ್ಧದ ವಿರುದ್ಧ ನಾಗರಿಕ ಹಕ್ಕುಗಳಿಗಾಗಿ ನಡೆಯುತ್ತಿದ್ದ ಚಳುವಳಿಗಳಿಂದ ಪ್ರಭಾವಿತಗೊಂಡು ಮಹಿಳಾ ಚಳುವಳಿಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು.

(ಆಗ್ನೇಯ ಏಷಿಯಾದಲ್ಲಿ ಶಾಂತಿಗಾಗಿ ಮಹಿಳಾ ಚಳುವಳಿ'' ಎಂಬ ಸಂಘಟನೆಯ ಪ್ರತಿನಿಧಿಯಾಗಿ ಮೊಹುವಾ ಚಟರ್ಜಿ ಅವರು ಈಚೆಗೆ ನಿಘಾಟ್‌ಅವರನ್ನು ಲಾಹೋರಿನಲ್ಲಿ ಭೇಟಿ ಮಾಡಿದರು. ಈ ಸಂದರ್ಶನದ ಕೆಲವು ಪ್ರಶ್ನೆಗಳನ್ನು ಇಲ್ಲಿ ಪ್ರಕಟಿಸಲಾಗಿದೆ.)

ನಿಘಾಟ್ ಅವರೇ, ಪಾಕಿಸ್ತಾನದಲ್ಲಿ ನಡೆಯುತ್ತಿರುವ ಮಹಿಳಾ ಚಳುವಳಿಗಳ ಬಗ್ಗೆ ಕೆಲವು ಮಾಹಿತಿ ಕೊಡುವಿರಾ?

ಪಾಕಿಸ್ತಾನವು ಸ್ವತಂತ್ರಗೊಂಡ ಮೊದಲ ದಿನಗಳಲ್ಲಿಯೇ ಅದೊಂದು ಇಸ್ಲಾಮಿಕ್ ರಾಷ್ಟ್ರವಾಗಿ ರೂಪುಗೊಳ್ಳುತ್ತೆಯೋ, ಫೆಡರಲ್ ರಾಷ್ಟ್ರವಾಗುತ್ತದೆಯೋ ಇತ್ಯಾದಿ ಪ್ರಶ್ನೆಗಳು ಪ್ರಧಾನವಾಗಿ ಮೂಡಿಬಂದವು. ಮಹಿಳೆಯರ ಸ್ಥಾನವೇ ನಾಗುತ್ತದೆ ಎಂಬುದೂ ಒಂದು ಪ್ರಮುಖ ಪ್ರಶ್ನೆಯಾಗಿತ್ತು. ಮುಸ್ಲಿಂಲೀಗ್ ಮಹಿಳೆಯರ ಬಗ್ಗೆ ಹಲವಾರು ಆಶ್ವಾಸನೆಗಳನ್ನು ಕೊಟ್ಟಿತ್ತು. 1953ರಲ್ಲಿ ''ಮಹಿಳೆಯರ ಹಕ್ಕುಗಳ ಸಮಿತಿ'' ಒಂದು ಅಸ್ತಿತ್ವಕ್ಕೆ ಬಂದಿತು. 1956ರಲ್ಲಿ ಶಾಸನ ಸಭೆಗಳಲ್ಲಿ ಪ್ರತ್ಯೇಕವಾಗಿ ಮಹಿಳೆಯರಿಗೆ ಸ್ಥಾನ ಮೀಸಲಾಗಿತ್ತು. ಮಹಿಳೆಯರು ಮುಕ್ತ ಸ್ಥಾನಗಳಿಗೂ ಸ್ಪರ್ಧಿಸಬಹುದು ಎಂಬ ನೀತಿಯ ಮೇಲೆ ಮಹಿಳೆಯರಿಗೆ ಪ್ರತ್ಯೇಕವಾಗಿ ಎರಡು ಮತ ಚಲಾಯಿಸುವ ಹಕ್ಕು ಕೊಡಲಾಗಿತ್ತು. ಪುರುಷರು ಮುಕ್ತಸ್ಥಾನಗಳಿಗೆ ಮಾತ್ರ ಸ್ಪರ್ಧಿಸಬಹುದು. ಅವರಿಗೆ ಮಹಿಳೆಯರಿಗೆ ಮೀಸಲು ಸ್ಥಾನದ ಸ್ಪರ್ಧಿಗೆ ಮತ ಕೊಡುವ ಅವಕಾಶ ಇರಲಿಲ್ಲ. ಆದರೆ 1958ರಲ್ಲಿ ಆ ಸಂವಿಧಾನವನ್ನು ರದ್ದು ಮಾಡಿ ಮಾರ್ಷಲ್ ಲಾ ಜಾರಿ ಮಾಡಲಾಯಿತು.

1961ರಲ್ಲಿ ಜಾರಿಗೆ ಬಂದ ''ಕುಟುಂಬ ಕಾಯಿದೆಗಳ ಸುಗ್ರೀವಾಜ್ಞೆಗೆ ಆರ್ಡಿನೆನ್ಸ್'' ಮಹಿಳಾ ಹಕ್ಕುಗಳ ಸಮಿತಿ ಮಾಡಿದ ಶಿಫಾರಸುಗಳೇ ಆಧಾರವಾಗಿದ್ದವು. ಆ ಸುಗ್ರೀವಾಜ್ಞೆಯಲ್ಲಿದ್ದ ಅಂಶಗಳು ಇಸ್ಲಾಮಿಕ್ ಕಾಯ್ದೆಗಳನ್ನು ಬಹು ಉದಾರವಾಗಿ ಅರ್ಥೈಸುವ ಅಂಶಗಳೇ ಆಗಿದ್ದವು. ಮಹಿಳಾ ಹಕ್ಕುಗಳು ಮತ್ತು ಇಸ್ಲಾಂ ನೀತಿಗಳಿಗೆ ಸಂಬಂಧಿಸಿದಂತೆ ಪಾಕಿಸ್ತಾನ ದಲ್ಲಿರುವ ಕಾಯ್ದೆಗಳಿಗಿಂತ ಉತ್ತಮವಾದ ಕಾಯ್ದೆಗಳಿರುವುದು ಟ್ಯುನಿಸಿಯಾ ಮತ್ತು ಒಂದೆರಡು ಇತರೆ ದೇಶಗಳಲ್ಲಿ ಮಾತ್ರ. 1973ರಲ್ಲಿ ಅಸ್ತಿತ್ವಕ್ಕೆ ಬಂದ ಸಂವಿಧಾನ ಸಹ ಮಹಿಳೆಯರ ಬಗ್ಗೆ ಉದಾರ ಅಂಶಗಳಿಂದಲೇ ಕೂಡಿತ್ತು. ಮಹಿಳೆಯರಿಗೆ ಸಮಾನ ಸ್ಥಾನ ದೊರೆಯುವವರೆಗೂ ಸರ್ಕಾರ ಅದಕ್ಕಾಗಿ ಪ್ರಯತ್ನಿಸುವುದು ಎಂದೇ ಅದರಲ್ಲಿ ನಮೂದಿತವಾಗಿತ್ತು.

ಎಂದರೆ ಮಹಿಳೆಯರಿಗೆ ಸೂಕ್ತ ಅಧಿಕಾರ ಕೊಡಲು ವೇದಿಕೆ ರಚಿತವಾಗಿತ್ತು ಎನ್ನುತ್ತಿರೋ?

ನಮಗೆ ಆಗಲೇ ''ಪ್ರಜಾತಾಂತ್ರಿಕ ಮಹಿಳಾ ಸಂಘಟನೆ'' (ಡೆಮೋಕ್ರಾಟಿಕ್ ವಿಮೆನ್ಸ್ ಅಸೋಸಿಯೆಷನ್) ಎಂಬ ಸಂಘಟನೆ ಲಭ್ಯವಿತ್ತು. ಅದು 1948ರಲ್ಲೇ ಅಸ್ತಿತ್ವಕ್ಕೆ ಬಂದಿತ್ತು. ಅದು ಕಾರ್ಯನಿರತ ಮಹಿಳೆಯರ ಸಂಘಟನೆಯಾಗಿದ್ದು ಕಮ್ಯುನಿಸ್ಟ್ ಪಕ್ಷದೊಡನೆ ನಿಕಟ ಸಂಪರ್ಕವಿಟ್ಟುಕೊಂಡಿತ್ತು. ಜಡ್.ಎ. ಭುಟ್ಟೋ ಅವರ ಆಡಳಿತದಲ್ಲಿ ಮಹಿಳೆಯರಿಗೆ ಹೆಚ್ಚು ಸ್ವಾತಂತ್ರ್ಯ ದೊರೆಯಿತು. ಮಹಿಳಾ ಸಂಘಟನೆಗಳ ಒತ್ತಾಯದ ಫಲವಾಗಿ ಸೈನ್ಯದ ಹೊರತಾಗಿ ಉಳಿದ ಎಲ್ಲ ಸೇವಾಕ್ಷೇತ್ರಗಳಲ್ಲಿಯೂ ಮಹಿಳೆಯರಿಗೆ ಪ್ರವೇಶ ದೊರೆಯುವಂತೆ ಆಯಿತು. ಸೈನ್ಯದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಮಾತ್ರ ಮಹಿಳೆಯರಿಗೆ ಪ್ರವೇಶವಿತ್ತು. ವೈಸ್‌ಚಾನ್ಸಲರುಗಳಾಗಿ,

ಗವರ್ನರ್‌ಗಳಾಗಿ ಮಹಿಳೆಯರೂ, ಮಹಿಳೆಯರ ಶಿಕ್ಷಣ, ಆರೋಗ್ಯ ರಕ್ಷಣೆ, ಸಮಾನವೇತನ ಮೊದಲಾದ ವಿಷಯಗಳನ್ನು ಸಹ ಪ್ರಸ್ತಾಪ ಮಾಡಿದರು.

ಸಂಘಟನೆಗಳ ಒತ್ತಾಯದ ಫಲವಾಗಿ ಭುಟ್ಟೊ ಅವರು ಮತ್ತೊಂದು 'ಮಹಿಳಾ ಹಕ್ಕುಗಳ ಆಯೋಗ' ಒಂದನ್ನು ರಚಿಸಿದರು. ಆಯೋಗ ಹಲವು ಮೂಲಭೂತ ಸಲಹೆಗಳನ್ನು ಇತ್ತಿತು. ಅದು ಎರಡು ಬಹು ಅಮೂಲ್ಯ ಸಲಹೆ ಮಾಡಿತು. ಮೊದಲನೆಯದಾಗಿ ವಂಶಪಾರಂಪರ್ಯವಾಗಿ ಬಂದ ಆಸ್ತಿಯಲ್ಲಿಯೂ ಸಹ ಹೆಣ್ಣು ಮಕ್ಕಳಿಗೆ ಪಾಲು ದೊರೆಯಬೇಕು ಮತ್ತು ಎರಡನೆಯದಾಗಿ ಚುನಾವಣೆಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಲ್ಲಿ ಶೇ 20ರಷ್ಟು ಸ್ಥಾನಗಳಿಗೆ ಮಹಿಳೆಯರನ್ನು ದಾಖಲಿಸದೆ ಹೋದ ಯಾವ ಪಕ್ಷಕ್ಕೂ ರಾಜಕೀಯ ಪಕ್ಷವೆಂದು ಮನ್ನಣೆ ಕೊಡಲಾಗದು.

ಈ ಸಲಹೆಗಳಿಗೆ ಈಗ ಸರ್ಕಾರ ಬದ್ಧವಾಗಿದೆಯೇ?

ಇಲ್ಲ. ಅವು ಆಯೋಗದ ಶಿಫಾರಸು ಮಾತ್ರ. ಅದೊಂದು ಒಳ್ಳೆಯ ಸೂಚನೆ ಮಾತ್ರ. ಅದನ್ನೂ ಈಗ ಅನುಷ್ಠಾನಗೊಳಿಸಿಲ್ಲವಾದರೂ, ಅದು ಸಲಹೆಯಾಗಿ ಉಳಿದಿದೆ. ಇಂತಹ ವಾತಾವರಣದಲ್ಲಿಯೇ ನಾವೆಲ್ಲ ಬೆಳೆದು ಬಂದಿದ್ದೇವೆ. ಸೂಚನೆಗಳು ಬಹು ಉದಾರವಾಗಿಯೇ ಇದ್ದರೂ ಮಹಿಳೆಯರಿಗೆ ಅದು ಲಭ್ಯವಾಗಿಲ್ಲ.

ಹೀಗೇಕಾಯಿತು?

1977ರಲ್ಲಿ ಜಿಯಾ ಉಲ್ ಹಕ್ ಅಧಿಕಾರರೂಢರಾಗಿ ರಾಜ್ಯ ಆಡಳಿತವನ್ನೂ ಇಸ್ಲಾಮೀಕರಿಸಲು ತೊಡಗಿದ ಮೇಲೆ ಮಹಿಳಾ ಚಳವಳಿಯ ಮೇಲೆ ತೀವ್ರ ಆಘಾತವಾಯಿತು. ದೇಶವನ್ನು ಇಸ್ಲಾಮೀಕರಿಸಬೇಕೆಂದು ಅದು ಮಹಿಳೆಯರನ್ನೂ ಇಸ್ಲಾಮೀಕರಿಸುವುದರಿಂದಲೇ ಮೊದಲಾಗಬೇಕೆಂದೂ ಅವರು ಆಜ್ಞೆ ಮಾಡಿದರು. ಚೌದರ್-ಚಾರ್ ದಿವಾರಿಯನ್ನು ಪ್ರಸ್ತಾಪಿಸಿ ಅದೇ ಅತಿ ಪವಿತ್ರವೆಂದರು. ನಮಗೆ ಪಾಕಿಸ್ತಾನದಲ್ಲಿ ಬುರ್ಖಾ, ಚಾದರ್ ಪರಿಚಯವೇ ಇರಲಿಲ್ಲ. ಜಿಯಾ ಅವರು ಅಧಿಕಾರ ವಹಿಸುವ ಮೊದಲು ಭಾರತ ಮತ್ತು ಇತರೆ ಕೆಲವು ದೇಶಗಳಿಂದ ವಲಸೆ ಬಂದ ಕೆಲವು ಮುಸ್ಲಿಮ್ ಮಹಿಳೆಯರು ಮಾತ್ರ ಬುರ್ಖಾ ಧರಿಸುತ್ತಿದ್ದರು.

ಇಸ್ಲಾಂನಲ್ಲಿರುವ ಶಿಕ್ಷೆಗಳ ಬಗ್ಗೆ ಜಿಯಾ ಕಾಯಿದೆ ಮಾಡಿದರು. ವ್ಯಭಿಚಾರ, ಅತ್ಯಾಚಾರ, ಇತ್ಯಾದಿಗಳ ಮೇಲೆ ಸುಗ್ರೀವಾಜ್ಞೆಗಳನ್ನು ಮಾಡಲಾಯಿತು. 1981ರಲ್ಲಿ ಆ ಕಾಯ್ದೆಗಳನ್ನು ಅನುಷ್ಠಾನಗೊಳಿಸುವವರೆಗೂ ಅವರ ನಿಜರೂಪ ನಮಗೆ ತಿಳಿದಿರಲಿಲ್ಲ. ಈ ಕ್ರಮಗಳಿಗೆ ಮಹಿಳೆಯರ ಪ್ರತಿಕ್ರಿಯೆ ಜೋರಾಗಿತ್ತು. 1981ರಲ್ಲಿ ವಿಮೆನ್ಸ್ ಆ್ಯಕ್ಷನ್ ಫೋರಂನ ಅಡಿಯಲ್ಲಿ ನಾವು ಒಂದಾದೆವು. ಆದರೆ ನಮಗೆ ಆಗ ಹಣಬಲವಿರಲಿಲ್ಲ, ದೂರವಾಣಿ ಸೌಕರ್ಯವಿರಲಿಲ್ಲ, ನಮ್ಮದೆಂದು ಹೇಳಿಕೊಳ್ಳುವ ಒಂದು ವಿಳಾಸವೂ ಇರಲಿಲ್ಲ.

ಆದರೂ ನಾವು ಮೂರು ನಗರಗಳಿಂದ ಕಾರ್ಯಕ್ಕೆ ತೊಡಗಿದೆವು. ಕಡೆಯ ಪಕ್ಷ ವಾರಕ್ಕೆ ಒಮ್ಮೆ ಸಭೆ ಸೇರುತ್ತಿದ್ದೆವು. ಒಂದು ರಾಷ್ಟ್ರೀಯ ಸಮಾವೇಶ ನಡೆಸಿದೆವು. ಹಲವಾರು ವಿಷಯಗಳ ಬಗ್ಗೆ ನಾವು ಒಂದು ನಿರ್ದಿಷ್ಟ ನಿಲುವು ತೆಗೆದುಕೊಂಡು ಜಿಯಾ ಅವರು ಯಾವಾಗೂ ಎಚ್ಚರವಾಗಿರುವಂತೆ ಮಾಡಿದೆವು. 1977 ರಿಂದ 83ರವರೆಗೂ ಪಾಕಿಸ್ತಾನದಲ್ಲಿ ನಮ್ಮ ಚಟುವಟಿಕೆ ಸ್ವಲ್ಪ ಸದ್ದಿಲ್ಲದಿತ್ತು. ರಾಜಕೀಯ ಪಕ್ಷಗಳು ಸಹ ತೆಪ್ಪಗಿದ್ದವು. ಭಯೋತ್ಪಾದಕ ವಾತಾವರಣವಿತ್ತು. ಕಡೆಗೆ ಮಹಿಳೆಯರೇ ಮೌನವನ್ನು ಮುರಿದರು. ಜಿಯಾ ಅವರು 'ಸಾಕ್ಷ್ಯ'ದ ಬಗ್ಗೆ ತಯಾರಿಸಿದ ಒಂದು ಮಸೂದೆಯ ವಿರುದ್ಧ ಮಹಿಳಾ ಸಂಘಟನೆಗಳು ಸಿಡಿದೆದ್ದವು. ಲಾಹೋರಿನಲ್ಲಿ ಬೀದಿ ಕದನವೇ ನಡೆಯಿತು. ಸ್ವಲ್ಪ ದೂರ ಮೆರವಣಿಗೆಯಲ್ಲಿ ಹೋಗಿ ಉನ್ನತ ನ್ಯಾಯಾಲಯಕ್ಕೆ ನಾವು ಒಂದು ಮನವಿ ಸಲ್ಲಿಸುವ ಕಾರ್ಯಕ್ರಮವಿತ್ತು. ನಮ್ಮನ್ನು ಪೋಲೀಸಿನವರು ತಡೆಯಲು ಪ್ರಯತ್ನಿಸಿದರು. ಕೆಲವರನ್ನು ಬಂಧಿಸಲಾಯಿತು. ಆದರೂ ನಮ್ಮಲ್ಲಿ ಕೆಲವರಾದರೂ ನ್ಯಾಯಾಲಯವನ್ನು ತಲುಪಿದೆವು. ಅಲ್ಲಿಗೆ ಅಡ್ಡಿ ಮುರಿಯಿತು. ಎಲ್ಲರೂ ಚುರುಕಾದರು, ಎಲ್ಲ ಪಕ್ಷಗಳೂ, ಕಾರ್ಮಿಕ ಸಂಘಟನೆಗಳು ನಮ್ಮನ್ನು ಕೂಡಿಕೊಂಡವು. ಅದು 1983 ಫೆಬ್ರವರಿ 12ರಂದು ನಡೆಯಿತು.

ಆಗಸ್ಟ್ ವೇಳೆಗೆ ಪ್ರಜಾತಂತ್ರದ ಪುನರ್ ಸ್ಥಾಪನೆಗಾಗಿ ಚಳುವಳಿ ಬಲವಾಯ್ತು. ಹೋರಾಟದಲ್ಲಿ ಮಹಿಳೆಯರ ಪಾತ್ರ ಗಣನೀಯವಾಗಿತ್ತು. ನಂತರ ಸರ್ಕಾರೇತರ ಸಂಘಟನೆಗಳೂ, ಮಾನವ ಹಕ್ಕುಗಳ ರಕ್ಷಣಾ ಚಳವಳಿ, ಸಾರ್ವಜನಿಕ ಹಿತ ರಕ್ಷಣಾ ವಿವಾದ/ಸಂಘಟನೆಗಳು ಚುರುಕಾಗಿ ಚಟುವಟಿಕೆ ಪ್ರಾರಂಭಿಸಿದವು. ನಾವು ಪಾಕಿಸ್ತಾನದಲ್ಲಿ ರಾಜಕೀಯವನ್ನು ಪ್ರವೇಶಿಸಬೇಕೆಂದು ಬಯಸಿದೆವು. 1977 ರಿಂದ 83ರ ವರೆಗಿನ ಹೊರತಾಗಿ, ಅನಂತರ ಕ್ರಾಂತಿಕಾರಿ ಹೋರಾಟಗಳು ಉದ್ಭವಿಸಿದವು.

ಆದರೆ ಈಚಿಗಿನ ಚಳವಳಿಗಳು ಹೆಚ್ಚಾಗಿ ಒಂದು ಸಾಮಾಜಿಕ ಗುರಿಯಿಂದ ಪ್ರೇರಿತವಾದ ಹೋರಾಟದ ಬದಲಿಗೆ ಉದ್ಯೋಗಕ್ಕಾಗಿ ನಡೆಯುವ ಹೋರಾಟವಾಗಿವೆ. ಆದರೂ ಹೋರಾಟಗಳು ಉಗ್ರವಾಗಿದ್ದು ಇಂದಿನವುಗಳನ್ನೂ ಸರ್ಕಾರ ಮತ್ತು ಇಸ್ಲಾಮಿಕ್ ಸಂಘಟನೆಗಳು ಉಗ್ರವಾಗಿ ವಿರೋಧಿಸುತ್ತಿವೆ. ಈ ಹೋರಾಟಗಳು ಸರ್ಕಾರಕ್ಕೂ ಇಸ್ಲಾಮಿ ಸಂಘಟನೆಗಳಿಗೂ ಬಲವಾದ ಎದುರಾಳಿಯಾಗಿವೆ.

ಪಾಕಿಸ್ತಾನದ ಮಹಿಳಾ ಚಳವಳಿಗೂ, ಇತರೆ ದೇಶಗಳಲ್ಲಿನ ಮಹಿಳಾ ಚಳವಳಿಗೂ ಏನಾದರೂ ನಿರ್ದಿಷ್ಟ ವ್ಯತ್ಯಾಸಗಳಿವೆಯೇ?

ಲ್ಯಾಟಿನ್ ಅಮೇರಿಕದಲ್ಲಿನ ಚಳುವಳಿಗಳಂತೆ ಇಲ್ಲಿ ಸಹ ಚಳವಳಿ ಸರ್ಕಾರದ ವಿರುದ್ಧ ಬಲವಾದ ಹೋರಾಟವಾಗಿದೆ. ಚಳುವಳಿಯಲ್ಲಿರುವ ವಿವಿಧ ಸಂಘಟನೆಗಳ ನಡುವೆ ಏನೇ ಭಿನ್ನಭಿಪ್ರಾಯಗಳಿದ್ದರೂ, ಹೋರಾಟದಲ್ಲಿ ಎಲ್ಲ ಸಂಘಟನೆಗಳೂ ದಕ್ಷವಾಗಿ ಪಾಲ್ಗೊಳ್ಳುತ್ತವೆ. ನಮ್ಮ ಸಂಘಟನೆ ಬೇರೆ ಎಲ್ಲ ಸಂಘಟನೆಗಿಂತ ಸೈದ್ಧಾಂತಿಕವಾದ ನಿಲುಮೆಯ ಮೇಲೆ ಪ್ರವೃತ್ತವಾಗಿದೆ. ನಾವು ಸಮಾಜವಾದಿಗಳೂ ಮತ್ತು ಮಹಿಳಾ ಪರವಾದಿಗಳು. ನಮ್ಮದು ಮತನಿರಪೇಕ್ಷ ಸಂಘಟನೆಯಾಗಿತ್ತು. ಸ್ವತಂತ್ರ ಮಹಿಳಾ ಚಳುವಳಿಯ ಮೇಲೆ ಭರವಸೆವುಳ್ಳವರು. ದಕ್ಷಿಣ ಏಷ್ಯಾದಲ್ಲಿ ಶಾಂತಿ ಸ್ಥಾಪನೆ, ಭಾರತದೊಡನೆ ಸಖ್ಯ ಮೊದಲಾದ ವಿಷಯಗಳಲ್ಲಿ ನಾವು ತೀವ್ರ ಪ್ರಯತ್ನ ನಡೆಸುತ್ತೇವೆ.

ಎಂದರೆ ಇತರೆ ಸಂಘಟನೆಗಳಿಗೆ ಈ ವಿಷಯದ ಬಗ್ಗೆ ನಿಮ್ಮೊಡನೆ ಒಮ್ಮತವಿಲ್ಲವೇ?

ಸಮಾಜವಾದದ ಬಗ್ಗೆ ಬೇರೆಯವರಾರೂ ನಮ್ಮಷ್ಟು ನಿಖರವಾದ ನಿಲುಮೆ ಉಳ್ಳವರಾಗಿಲ್ಲ. ಮಾರ್ಕ್ಸ್‌ವಾದಿ ಅಲ್ಲದೆ, ಬೇರಾವ ಸಂಘಟನೆಗಳೂ ನಿಷ್ಠ ಮಹಿಳಾವಾದಿ ಸಂಘಟನೆಯಾಗಿಲ್ಲ. ಕೆಲವು ಸಂಘಟನೆಗಳು ನಿಷ್ಠವಾಗಿ ಮತನಿರಪೇಕ್ಷಕವಾಗಿಯೂ ಇವೆ.

ಪಾಕಿಸ್ತಾನದಲ್ಲಿ ಎಡ ಪಕ್ಷಗಳೇಕೆ ಹಿಂದುಳಿದಿವೆ?

ಪಾಕಿಸ್ತಾನದಲ್ಲಿ ಬಹಳ ಕಾಲ ಎಡಪಕ್ಷಗಳು ಬಹಿಷ್ಕೃತವಾಗಿದ್ದವು. 1950ರ ದಶಕದಲ್ಲಿಯೇ ಕಮ್ಯುನಿಸ್ಟ್ ಪಕ್ಷ ಬಹಿಷ್ಕೃತವಾಯ್ತು. ಹಲವಾರು ದಶಕಗಳ ಕಾಲ ಅದು ಭೂಗತವಾಗಿಯೇ ಚಟುವಟಿಕೆ ನಡಸಿದೆ. ಅಲ್ಲದೆ ಪಕ್ಷದಲ್ಲಿ ಹಲವಾರು ಗುಂಪುಗಳೂ ಆಗಿವೆ. ಈಗ ಪ್ರಮುಖವಾಗಿ ಮೂರು ಗುಂಪುಗಳಾಗಿವೆ. ಅವುಗಳ ಹಿಂಬಾಲಕರೂ ಕೆಲವರೇ ಆದರೂ ಅವು ತಮ್ಮ ಹಳೆಯ ಸಂಪ್ರದಾಯಗಳಲ್ಲೇ ಮುಂದುವರೆದಿವೆ. ಅವು ಯಾವುವೂ ಹೊಸ ಬೆಳವಣಿಗೆಗಳನ್ನು ಜೀರ್ಣಿಸಿಕೊಂಡಿಲ್ಲ.

ಇಲ್ಲಿ ಮೊದಲಿದ್ದ ಕಮ್ಯೂನಿಸ್ಟ್ ನಾಯಕರೆಲ್ಲ ಭಾರತದಿಂದ ಕಳುಹಿಸಲ್ಪಟ್ಟವರೇ. ಪಕ್ಷಕ್ಕೆ ಇಲ್ಲಿ ಬಲವಾದ ಬೇರು ಇಲ್ಲ. ಪಕ್ಷವನ್ನು ಬಹಿಷ್ಕರಿಸಿದಾಗ ಭಾರತದಿಂದ ಬಂದ ನಾಯಕರು ಹಿಂತಿರುಗಿದರು. ಇಲ್ಲೇ ಉಳಿದ ನಾಯಕರ ಮಾತೃಭಾಷೆ ಉರ್ದುವಾಗಿತ್ತು. ಇಲ್ಲಿನ ಭಾಷೆ ಅವರಿಗೆ ತಿಳಿದಿರಲಿಲ್ಲ. ಇದು ಅವರ ಮಾತೃಭೂಮಿಯಾಗಿರಲಿಲ್ಲ. ಅಂತೆಯೇ ಅವರನ್ನೂ ನಾಯಕರಾಗಿ ಜನ ಸ್ವೀಕರಿಸಲಿಲ್ಲ. ಈಗ ಪಕ್ಷದ ಮೇಲೆ ಬಹಿಷ್ಕಾರವಿಲ್ಲ, ನಾವು ಇನ್ನೂ ಇಲ್ಲಿ ನಮ್ಮ ಸ್ಥಿತಿಗೆ ತಕ್ಕಂತೆ ನಮ್ಮ ಕಾರ್ಯಗಳನ್ನೆ ಸರಿಯಾಗಿ ನಿರ್ವಹಿಸಿಲ್ಲ.

★ ★ ★ ★

ವಿದ್ಯಾರ್ಥಿನಿಯರ ಶೋಷಣೆ

ಮಹಿಳೆಯರ ಶಿಕ್ಷಣ ಸಾಮಾಜಿಕವಾಗಿ ದುರ್ಭಲವಾಗುತ್ತಿದೆಯೆ? ಕೆಲವು ವರ್ಷಗಳ ಹಿಂದೆ ಮಧ್ಯಪ್ರದೇಶದ ಕಾಲೇಜು ವಿದ್ಯಾರ್ಥಿಯೊಬ್ಬಳಿಗೆ ಅವಳ ಕಿಡಿಗೇಡಿ ಸಹಪಾಠಿಗಳು ಚುಡಾಯಿಸಿ, ಅವಳ ಮೇಲೆ ಜೀಪ್ ಬಿಟ್ಟು ಜೀವ ತೆಗೆದ ದೃಶ್ಯ ಇನ್ನೂ ಜನಮನದಲ್ಲಿ ಹಸಿರಿರುವಾಗಲೇ ಚೆನ್ನೈಯಲ್ಲಿ ಇಂಥದೇ ಘಟನೆ ನಡೆಯಿತು. ಈ ಘಟನೆ ನಂತರ ಹುಡುಗಿಯ ತಂದೆ ದೂರದರ್ಶನದ ಸಂದರ್ಶನದಲ್ಲಿ ಹೇಳಿದ ಮಾತು ಇನ್ನೂ ನೆನಪಿದೆ- ''ನಮ್ಮ ಮಕ್ಕಳಿಗೆ ಯಾವ ರೀತಿಯ ರಕ್ಷಣೆಯೂ ದೊರೆಯದಿದ್ದರೆ ನಾವು ಅವರನ್ನು ಕಾಲೇಜಿಗೆ ಏಕೆ ಮತ್ತು ಹೇಗೆ ಕಳಿಸಬೇಕು'' ಎಂದು ನೊಂದ ತಂದೆ ಬಿಕ್ಕಿ ನುಡಿದಿದ್ದರು.

ಶಾಲಾ ಕಾಲೇಜುಗಳ ವಿದ್ಯಾರ್ಥಿನಿಯರಿಗೆ ಅವರ ಸಹಪಾಠಿಗಳಿಂದ ದೊರೆಯುವ ಕಿರುಕುಳ ಇಂತಹದಾದರೆ, ಇನ್ನು ಅಧ್ಯಾಪಕರುಗಳಿಂದ ಹೊಸ ರೀತಿಯ ಕಿರುಕುಳಗಳು ಪತ್ರಿಕೆಗಳಲ್ಲಿ ವರದಿಯಾಗಿವೆ. ವಿದ್ಯಾರ್ಥಿನಿಯರೊಂದಿಗೆ ಉಪನ್ಯಾಸಕರ ಅನುಚಿತ ವರ್ತನೆ, ವಿದ್ಯಾರ್ಥಿನಿಯ ಕಣ್ಮರೆ, ವಿದ್ಯಾರ್ಥಿನಿಯೊಂದಿಗೆ ಶಿಕ್ಷಕನ ನಾಪತ್ತೆ ಇಂತಹ ಸುದ್ದಿಗಳು ದಾವಣಗೆರೆ ಜಿಲ್ಲೆಯಲ್ಲಿ ಹಲವಾರು ಪೋಷಕರ ಆತಂಕಕ್ಕೆ ಕಾರಣವಾಗಿವೆ.

ಹರಿಹರದ ಪ್ರತಿಷ್ಠಿತ ಕಾಲೇಜೊಂದರ ಕನ್ನಡ ಉಪನ್ಯಾಸಕರಾಗಿರುವ ಪಿ. ನಾಗಪ್ಪ ಎಂಬುವವರು ತಮ್ಮ ಕಾಲೇಜಿನ ಆರು ವಿದ್ಯಾರ್ಥಿನಿಯರನ್ನು ಪಿಕ್‌ನಿಕ್ ಕರೆದುಕೊಂಡು ಹೋಗಿ ಅಲ್ಲಿ ಅಸಭ್ಯವಾಗಿ ವರ್ತಿಸಿದರು ಎಂಬ ಪ್ರಕರಣ ವರದಿಯಾಗಿದೆ. ಹಾಗೆಯೇ ಆ ಉಪನ್ಯಾಸಕನ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮುಷ್ಕರದ ಹಾದಿಯನ್ನು ಹಿಡಿದಿದ್ದಾರೆ.

ಅದೇ ರೀತಿಯಾಗಿ ಹೊನ್ನಾಳಿಯಲ್ಲಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಜಯಪ್ಪ ಕಾಲೇಜಿನಲ್ಲಿ ಪಾಠ ಮಾಡುವಾಗ ಅಶ್ಲೀಲವಾಗಿ ನಡೆದುಕೊಳ್ಳುತ್ತಿದ್ದು ಅಲ್ಲದೇ ಕಾಲೇಜಿನ ಗೋಡೆಗಳ ಮೇಲೆ ವಿದ್ಯಾರ್ಥಿನಿಯರ ಹೆಸರನ್ನು ಬರೆದು ಖುಷಿ ಪಡುತ್ತಿದ್ದ ಪ್ರಕರಣವೂ ಬಯಲಾಗಿದೆ. ಈಗ ಸದ್ಯಕ್ಕೆ ವಿದ್ಯಾರ್ಥಿಗಳ ಮತ್ತು ಪೋಷಕರ ಒತ್ತಡದಿಂದ ಈ ಉಪನ್ಯಾಸಕರು ಜೈಲು ಸೇರಿದ್ದಾರೆ.

ಈ ಎಲ್ಲ ಘಟನೆಗಳೂ ಹೆಣ್ಣು ಮಕ್ಕಳ ಶಿಕ್ಷಣಕ್ಕಿರುವ ಅಡ್ಡಿ ಆತಂಕಗಳನ್ನು ಸೂಚಿಸುವುದಲ್ಲದೆ ಅವರಿಗೆ ಮಾರ್ಗದರ್ಶಿಯಾಗಬೇಕಾದವರೆ ಕಂಟಕರಾಗಿರುವ ಬಿಸಿ ವಾಸ್ತವತೆಯನ್ನು ತೋರಿಸುತ್ತದೆ. ಬೇಲಿಯೇ ಎದ್ದು ಹೊಲ ಮೇಯ್ದರೇ?

ನಿರ್ದೇಶಕಿಯ ದ್ವಂದ್ವಗಳು

ಸಲಾಂ ಬಾಂಬೆ, ಮಿಸಿಸಿಪ್ಪಿ ಮಸಾಲ, ಕಾಮಸೂತ್ರ ಮುಂತಾದ ಬೇರೆ ದಿಕ್ಕಿನ ಚಲನ ಚಿತ್ರಗಳನ್ನು ನಿರ್ದೇಶಿಸಿದ ಶ್ರೀಮತಿ ಮೀರಾನಾಯರ್ ಒಂದು ಇಂಗ್ಲೀಷ್ ಛಾನಲ್‌ನಲ್ಲಿ ಸಂದರ್ಶನ ನೀಡುತ್ತಾ ಚಿತ್ರ ಜಗತ್ತಿನ ವಿಚಿತ್ರ ತರ್ಕಗಳನ್ನು ತೆರೆದಿಟ್ಟಿದ್ದಾರೆ.

''ನಾನು ಥಿಯೇಟರ್ ಮೂಲದಿಂದ ಬಂದವಳು. ಈ ಬೆಳ್ಳಿತೆರೆಯಲ್ಲಿ ರಂಗದ ಕಲಾತ್ಮಕತೆಯನ್ನೆಲ್ಲಾ ತಂದು ನೋಡುಗರಿಗೆ ಹೊಸ ಅನುಭವರನ್ನು ನೀಡಬೇಕೆಂದು ಬಯಸಿದವಳು. ನನ್ನ ಚಿತ್ರದ ವಸ್ತು ಯಾವುದೇ ಇರಲಿ ಅದರೆ ತಲ ಸ್ಪರ್ಶಿತ್ವಕ್ಕಾಗಿ ತುಡಿಯುವವಳು. ಈ ನಿಟ್ಟಿನಲ್ಲಿ ಸಲಾಂಬಾಂಬೆ ಯಶಸ್ಸು ಗಳಿಸಿತು. ಒಂದಿಷ್ಟು ಪ್ರಶಸ್ತಿಗಳನ್ನು ಗಿಟ್ಟಿಸಿತು. ಆದರೆ ಹಣವನ್ನಲ್ಲ.

ಹಣಕ್ಕಾಗಿಯೇ ನಾನು 'ಕಾಮಸೂತ್ರ'ವನ್ನು ನಿರ್ಮಿಸಿದೆ. ಹೌದು, ಅದು ವಿಪರೀತವಾದ ವಿವಾದಗಳಿಗೆ ಸಿಲುಕಿಕೊಂಡಿತು. ಆದರೆ ಹಣ ಗಳಿಕೆಯಿಂದ ಯಶಸ್ವಿಯಾಯಿತು. ನಾನು ಈ ವಾದ ಸೃಷ್ಟಿಸುವವರನ್ನು ಒಂದು ಪ್ರಶ್ನೆ ಕೇಳುತ್ತೇನೆ. ಇವತ್ತು ಬರುತ್ತಿರುವ ಎಲ್ಲ ಭಾರತೀಯ ಚಿತ್ರಗಳನ್ನು ಗಮನಿಸಿ. ಇದು ನಾಯಕ ಪ್ರಧಾನವಾಗಿರುತ್ತದೆ. ಈ ಹೊಡೆದಾಟ, ಆದರ್ಶಪ್ರತಿಪಾದನೆ ಯಾವುದೂ ವಾಸ್ತವ ಜಗತ್ತಿನ ಹತ್ತಿರವೇ ಇರುವುದಿಲ್ಲ. ಎಲ್ಲ ಅತಿರೇಕಗಳ ಗೂಡುಗಳೇ. ಆದರೂ ಜನ ನೋಡುತ್ತಾರೆ. ಸ್ಟಾರ್‌ಗಳು ಹಣ ಹೆಸರು ಗಳಿಸುತ್ತಾರೆ. ಇಲ್ಲಿ ತರ್ಕ ಎನ್ನುವುದು ಕೆಲಸವೇ ಮಾಡುವುದಿಲ್ಲ. ಆದ್ದರಿಂದ ವಾದ ಹುಟ್ಟುವುದಿಲ್ಲ. ನಾನು ಕಾಮಸೂತ್ರದಲ್ಲಿ ಇಂಥ ಅತಿರೇಕಗಳನ್ನೇನೂ ತೋರಿಸಿರಲಿಲ್ಲ. ಹೊಡೆದಾಟದ ಅತಿಗಳನ್ನು ಸಹಿಸುವ ಜನಕ್ಕೆ ನನ್ನ ಕಲಾತ್ಮಕತೆಯನ್ನು ಸಹಿಸುವುದಾಗಲಿಲ್ಲ.

ನಾನು ನನ್ನ ಚಿತ್ರಗಳಿಗೆ ನನ್ನ ಬುದ್ಧಿಯಷ್ಟನ್ನೇ ಅಲ್ಲ, ನನ್ನ ಶ್ರಮವನ್ನೂ ಹಾಕುತ್ತೇನೆ ಕ್ಯಾಬರೆ ನರ್ತಕಿಯರ ಬಗ್ಗೆ ಚಿತ್ರ ನಿರ್ಮಿಸಲು ಇಂಥ ನರ್ತಕಿಯರ ಜೊತೆ ಒಂದು ತಿಂಗಳ ವಾಸ ಮಾಡಿದೆ. ಕೆಲವರನ್ನು ಪರಿಚಯ ಮಾಡಿಕೊಂಡು 'ನಾನು ನಿಮ್ಮ ಜೊತೆ ಕೆಲದಿನಗಳಿರುತ್ತೇನೆ' ಎಂದೆ. ಅವರಿಗೆ ಮೊದಲು ಅರ್ಥವೇ ಆಗಲಿಲ್ಲ ನಂತರ ಗಾಬರಿಯಾಯಿತು. ನಂತರ ಹೇಗೋ ಅರಮನಸ್ಸಿನಲ್ಲೇ ಅನುಮತಿಕೊಟ್ಟರು. ನೀವು ಅವರ ಬದುಕನ್ನು ಹತ್ತಿರದಿಂದ ನೋಡಬೇಕು. ಯಾರೂ ಊಹಿಸದಷ್ಟು ಯಾತನಾಮಯವಾಗಿರುತ್ತದೆ. ಬಹಳಷ್ಟು ಜನ ಬಲವಂತಕ್ಕೆ ಈ ದಂಧೆಗೆ ತಳ್ಳಲ್ಪಟ್ಟವರೇ. ಆ ಬಿಚ್ಚಿ ಕುಣಿಯುವ ದೇಹದ ಒಳಗೇ ಪುಟ್ಟ ಗೃಹಿಣಿಯ ಬೆಚ್ಚನೆಯ ಹೃದಯವಿರುತ್ತದೆ. ನಮಗೆಲ್ಲ ಅತಿ ಸಾಮಾನ್ಯವೆನಿಸುವ ಗಂಡ, ಮನೆ, ಮಕ್ಕಳು ಎನಿಸುವ ತುಂಬ ಮಧ್ಯಮ ವರ್ಗದ ಬದುಕೂ ಅವರ ಪಾಲಿಗೆ ಗಗನ ಕುಸುಮವಾಗಿರುತ್ತದೆ. ಅವರ ಹತ್ತಿರ ಹಣವಿರುತ್ತದೆ. ದೇಹದ ಅಗತ್ಯಗಳೂ ಪೂರೈಸಿಯಾವು. ಆದರೆ ನಾಳೆಗಳ ಚಿಂತೆ ಭಯಾನಕವಾಗಿರುತ್ತದೆ. ದೇಹ ಒಂದಿಂಚು ದಪ್ಪವಾದರೆ ಆಕಾಶವೇ ಮೈಮೇಲೆ ಕವಿಚಿದಷ್ಟು ವ್ಯಥಿತರಾಗುತ್ತಾರೆ ಇಂಥ ಅನುಭವ ಮತ್ತು ಬದುಕಿನ ಗ್ರಹಿಕೆ ಅವರ ನಡುವೆ ಬದುಕಿದಾಗ ಮಾತ್ರ ತಿಳಿಯಲು ಸಾಧ್ಯ.

ಈ ಎಲ್ಲ ಸಣ್ಣ ಸಣ್ಣ ಸೂಕ್ಷ್ಮಗಳನ್ನೂ ಕಲಾತ್ಮಕವಾಗಿರಿಸಿ, ನಾನು ಚಿತ್ರ ಮಾಡುತ್ತೇನೆ. ಆದರೆ ನನ್ನೊಳಗಿನ ವ್ಯಥೆ ಬೇರೆಯದೇ ಆಗಿದೆ. ನನ್ನ ಚಿತ್ರಗಳನ್ನು ಟೆಲಿವಿಷನ್ ಪ್ರಸಾರ ಮಾಡುವುದಿಲ್ಲ. ನಾನು ನನ್ನ ಕುಟುಂಬ ಮತ್ತು ಪರಿಚಿತರಿಗಾಗಿ ಮಾತ್ರ ಚಿತ್ರ ಮಾಡುತ್ತೇನೆಯೇ? ಅಥವಾ ನನ್ನ ಚಿತ್ರದ ಡಬ್ಬ ಹಿಡಿದು ಎಲ್ಲೆಲ್ಲಿ ಜನರ ಗುಂಪಿದೆಯೋ ಅಲ್ಲಲ್ಲಿಗೆ ಹೋಗಿ 'ನಾನೊಂದು ಚಿತ್ರ ಮಾಡಿದ್ದೇನೆ ನೀವು ನೋಡಿ' ಎಂದು ಕೇಳಲೇ? ಇದು ಈ ಕೆಟ್ಟ ವ್ಯವಸ್ಥೆಯಲ್ಲಿರುವ ಬೇಗುದಿಗಳು. ಆದರೂ ನಾನು ಜನರನ್ನು ತಲುಪಬೇಕು. ಆದರೆ ಇಗ ಉಳಿದವರು ಚಿತ್ರ ಮಾಡಿ ತಲುಪುತ್ತಿದ್ದಾರಲ್ಲ, ಹಾಗಲ್ಲ.

ವಿಮರ್ಶಕರು ಈಗಿನ ಚಿತ್ರಗಳನ್ನು ಧಾರಾಳವಾಗಿ ಟೀಕಿಸುತ್ತಾರೆ. ಕಲಾತ್ಮಕತೆಯ ಬಗ್ಗೆ ಚಿಂತಿಸುತ್ತಾರೆ. ಆದರೆ ನಮ್ಮಂಥ ನಿರ್ದೇಶಕರ ಚಿತ್ರಗಳು ಅವರಿಂದ ಮೆಚ್ಚುಗೆ ಗಳಿಸಿದರೂ ಜನರನ್ನು ತಲುಪುವಲ್ಲಿ ಸೋಲುತ್ತವೆ. ಒಂದು ವರ್ಗ ಹೇಳುತ್ತದೆ 'ಇದು ತುಂಬ ಪ್ರಬಲ ಮಾಧ್ಯಮ ಚಿತ್ರಗಳ ಮೂಲಕ ಜನರನ್ನು, ಅದರಲ್ಲೂ ನಿರಕ್ಷರಿಗಳನ್ನೂ ಎಜುಕೇಟ್ ಮಾಡಬೇಕು ಎಂದು ಆದರೆ ಅಂಥ ಪ್ರಯತ್ನಗಳು ವ್ಯವಸ್ಥಿತವಾಗಿ ಡಬ್ಬದಲ್ಲಿ ಕೊಳೆಯುವಂತೆ ಮಾಡಲಾಗುತ್ತದೆ. ಆದರೂ ನಾನು ಚಿತ್ರ ಮಾಡುತ್ತೇನೆ'' ★

ಜನಪದ ತ್ರಿಪದಿ

ಅಂದು

1 ಚಿಂತಾಕು ಇಟ್ಟುಕೊಂಡು ಚಿಪ್ಪಾಣ ತೊಟ್ಟು ಕೊಂಡು
ನಲಿವಾಕಿ ಇಲ್ಲಿ ಕೇಳ / ನಿನಗಂಡ
ಅಲ್ಲೊಬ್ಬಳ ಕೂಡ ನಗುತ್ತಿದ್ದ

2 ನಕ್ಕಾರೆ ನಗಲವ್ವ ನಗೆ ಮುಖದ ಕ್ಯಾದೀಗಿ
ನಾ ಮುಚ್ಚಿ ಮುಡಿದ / ಮಲ್ಲೀಗೆ ಹೂವ
ಅವಳೊಂದು ಗಳಿಗೆ ಮುಡಿಯಾಲಿ.

ಇಂದು

1 ಉದ್ಯೋಗ ಹಚ್ಚಿಕೊಂಡು ಮಕ್ಕಳ ಕಟ್ಟಿಕೊಂಡು
ಹೆಣಗುವಾಕಿ ಇಲ್ಲಿ ಕೇಳ / ನಿನಗಂಡ
ಅಲ್ಲೊಬ್ಬಳ ಕೂಡ ನಗುತ್ತಿದ್ದ

2 ನಕ್ಕಾರೆ ನಗಲೇಳು ಸಿಡಿಮುಖದ ಕೋಡಂಗಿ
ನಾ ಮರೆತು ಮುಡಿದ / ಕಣಗಾಲೆ ಹೂವ
ಅವಳೇನೆ ಮುಡಿದು ಹೆಣಗಾಲಿ.

- ಶಾಂತಾನಾಗರಾಜ್

ಬಗೆಯ ಹಿಂಸೆ, ದೌರ್ಜನ್ಯ, ಕಿರಿಕಿರಿ, ಅನ್ಯಾಯಗಳಿಗೆ ಸುಲಭವಾಗಿ ಬಲಿಯಾಗುವವರ ಸಂಖ್ಯೆ ಕಡಿಮೆಯೇನೂ ಇಲ್ಲ. ಆದ್ದರಿಂದಲೇ ಮಹಿಳೆಯರ ಸಶಕ್ತತೆ/ದುರ್ಬಲತೆಗಳನ್ನು ಯಾವುದೇ ಒಂದು ಸೂತ್ರಕ್ಕೆ ಇಳಿಸಿ, ಕಾನೂನಿನ ಮೂಲಕ ಪರಿಹರಿಸುವುದು ಅಷ್ಟು ಸುಲಭವಾಗುವುದಿಲ್ಲ, ಆದರೆ ಎಂಥದೇ ಪರಿಹಾರ ಕಾರ್ಯಾಚರಣೆಯೂ ಅಷ್ಟಿಷ್ಟಾದರೂ ಬದಲಾವಣೆಯನ್ನು ತಂದಿರುತ್ತದೆ ಎಂಬುದನ್ನೂ ನೋಡಬೇಕು.

ಶಿಕ್ಷಣ ಮತ್ತು ಕೌಟುಂಬಿಕ ಬೆಂಬಲ ಮಹಿಳೆಗೆ ಬದುಕಿನಲ್ಲಿ ತುಂಬ ಬದಲಾವಣೆ ತರಬಲ್ಲವು ಎಂಬುದರಲ್ಲಿ ಸಂದೇಹವಿಲ್ಲ. ಬದುಕಿನ ಎಲ್ಲ ಸಂದರ್ಭಗಳಿಗೂ ಮುಖಾಮುಖಿಯಾಗಿ, ಎದುರಿಸುವ ಆತ್ಮ ಸ್ಥೈರ್ಯ ಅವರೊಳಗೆ ಬೆಳೆಯಬೇಕಾದರೆ ಆರ್ಥಿಕ ಬಲ, ರಾಜಕೀಯ ಅಧಿಕಾರ, ಸಾಮಾಜಿಕ ಒತ್ತಾಸೆ, ಕಾನೂನಿನ ಬೆನ್ನೆಲುಬುಗಳೆಲ್ಲವೂ ಅತ್ಯಗತ್ಯ. ತಮ್ಮ ಜ್ಞಾನ, ಪ್ರತಿಭೆ, ಕೌಶಲಗಳನ್ನು ಬಳಸುವುದರಲ್ಲಿ ಮಹಿಳೆಯರು ಯಾರಿಗೂ ಕಮ್ಮಿಯಲ್ಲ,ಆದರೆ ವ್ಯವಸ್ಥೆಯ ರೂಢಿಗತ ನಂಬಿಕೆಗಳು ಪುರುಷರೇ 'ಬಾಸ್' ಗಳಾಗಲು ಅರ್ಹರೆಂದು ಭಾವಿಸುವಂತೆ ಮಾಡಿರುತ್ತವೆ. ಮಹಿಳೆ ತನ್ನ ಜೊತೆಯ ಪುರುಷರಿಗಿಂತ ಇಮ್ಮಡಿ ದುಡಿಮೆ, ಹೆಚ್ಚಿನ ಹೊಣೆ ಹೊರುತ್ತಿದ್ದಾಳೆ.

ಒಟ್ಟಾರೆ ನೋಡಿದಾಗ ಮನೆಯೊಳಗಿನ ತನ್ನ ಅಸ್ತಿತ್ವಕ್ಕಾಗಿ, ಹೊರಗಡೆ ತನ್ನ ಸಾಮರ್ಥ್ಯದ ಸ್ಥಾಪನೆಗಾಗಿ ಹೆಣಗುತ್ತಿರುವ ಇಂದಿನ ಮಹಿಳೆ ಯಾವ ವರ್ಗಕ್ಕೆ ಸೇರಿದವಳಾಗಿದ್ದರೂ ದುಡಿಮೆ ಮತ್ತು ಕುಟುಂಬದ ನಡುವೆ ಹೇಗಾದರೂ ಸಮತೋಲನ ಕಾಯ್ದು ಕೊಳ್ಳುವುದೇ ಅವಳ ಮುಖ್ಯ ಸವಾಲುಗಳಲ್ಲಿ ಒಂದು. ಕೆಳಸ್ತರದವರಿಗೆ ಬದುಕಿಗೆ ಆಧಾರವಾದ ಭೌತಿಕ, ಅವಶ್ಯಕತೆಗಳಿಗಾಗಿ ಶ್ರಮಿಸುವ ಅಸ್ತಿತ್ವ ಹೋರಾಟ ಮುಖ್ಯ. ಸವಲತ್ತಿನ ನೆಲೆಯಲ್ಲಿರುವವರಿಗೆ 'ಅಧಿಕಾರ' ಎನ್ನುವುದು ಮಾನಸಿಕ, ತಾತ್ವಿಕ, ಸೂಕ್ಷ್ಮ ಸಂವೇದನೆಯ ನೆಲೆಗೆ ಸೇರಿರುವಂಥ ಅವಶ್ಯಕತೆಯಾಗಿದೆ. ಈ ಬೇರೆ ಬೇರೆ ಸ್ತರಗಳ ಭಿನ್ನ ಅರ್ಥಗಳ ಅರಿವಿನೊಂದಿಗೇ ''ಮಹಿಳಾ ಸಶಕ್ತೀಕರಣ''ದ ತಾತ್ವಿಕತೆಯಾಗಲಿ, ಕಾರ್ಯಕ್ರಮಗಳಾಗಲೀ ರೂಪುಗೊಳ್ಳಬೇಕಾಗುತ್ತದೆ. ಇಲ್ಲದಿದ್ದಲ್ಲಿ ''ಸಬಲೀಕರಣವನ್ನು ನಾವು ಒಪ್ಪಿದರೆ ಮಹಿಳೆಯರು ದುರ್ಬಲರೆಂದು ಒಪ್ಪಿದಂತೆಯೇ ಸರಿ'' ಎಂದೋ ಅಥವಾ ''ಬದಲಾವಣೆ ನಮ್ಮ ಒಳಗಿನಿಂದಲೇ ಹುಟ್ಟಬೇಕೇ ಹೊರತು ಹೊರಗಿನಿಂದಲ್ಲ'' ಎಂದೋ ತಿಪ್ಪೆ ಸಾರಿಸುವ ಚರ್ವಿತ ಚರ್ವಣದ ಹೇಳಿಕೆಗಳಲ್ಲಿ ಈ ವರ್ಷ ಕೂಡ ಮುಗಿದು ಬಿಡುವ ಅಪಾಯ ತಪ್ಪಿದ್ದಲ್ಲ.

★

RNI No. 45577/88

''Achala'' 108, Skyline Surabhi,
14-9, Vidyapeeta Road, BSK III Stage,
Bangalore - 560 085

To:
Smt/Sri

CPMG/KA/BG-8/2001
Book-Post/News Letter